ಹಿತ್ತಲ ಗಿಡ

ಚಾತುರ್ಮಾಸಿಕ

ರೈತ, ವಿಜ್ಞಾನಿ, ವಿದ್ಯಾರ್ಥಿ, ಸ್ವಯಂ ಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

ಪೈರು 11, (ಕೊಯಿಲು 3), ಪೈರು 12, (ಕೊಯಿಲು 1), ಸೆಪ್ಟಂಬರ್ 2005 - ಏಪ್ರಿಲ್ 2006

ಮಹಮದ್ ಸಯಿದುಲ್ಲಾರವರ

ನೆಲಜಲಗಳೆರಡರ ಮೇಲೂ ಚಲಿಸುವ ಬೈಸಿಕಲ್



ಈ ಸಂಚಿಕೆಯಲ್ಲಿ

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟು ಹಾಕುವ ಪ್ರಯತ್ನ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಹಿತ್ತಲ ಗಿಡದ ಪೋಷಣೆಗೆ ಸಹಾಯ:
PRITVI (People Rewarding Initiatives in Technology Values & Institutions), Bangalore, **SRISTI** (Society for Research and Initiatives for Sustainable Technologies and Institutions), Ahmedabad & **NIF** (National Innovation Foundation, India), New Delhi

ಸಂಪಾದಕೀಯ

ಕಳೆದ ಒಂದು ದಶಕದಲ್ಲಿ 'ರಾಷ್ಟ್ರೀಯ ಕೃಷಿ ನೀತಿ'ಯಿಂದ ಹಿಡಿದು ಇತ್ತೀಚೆಗಿನ ಬೀಜ ಮಸೂದೆಗಳವರೆಗೆ ಕೃಷಿ, ಪರಿಸರ, ಅರಣ್ಯ, ಜೀವವೈವಿಧ್ಯ ಇತ್ಯಾದಿ ಗ್ರಾಮೀಣ ಬದುಕು ಮತ್ತು ಅರ್ಥ ವ್ಯವಸ್ಥೆಗೆ ನೇರವಾಗಿ ಸಂಬಂಧಿಸಿರುವ ಹಲವು ವಿಚಾರಗಳ ಮೇಲೆ ಹತ್ತಾರು ಶಾಸನಬದ್ಧ ಸರ್ಕಾರಿ ಪ್ರಯತ್ನಗಳು ಹೊರಬಂದಿರುತ್ತವೆ. ಜಾಗತೀಕರಣ, ಉಧಾರೀಕರಣಗಳ ಬಿರುಗಾಳಿಯಲ್ಲಿ ಸಿಕ್ಕ ಸರ್ಕಾರ, ಈ ಎಲ್ಲಾ ವಿಚಾರಗಳಲ್ಲಿ ತನ್ನ ಜವಾಬ್ದಾರಿಯನ್ನು ಸಡಿಲಗೊಳಿಸುತ್ತಿರುವ ಈ ದಿನಗಳಲ್ಲಿ ಇಂತಹಾ ಶಾಸನಬದ್ದ ಪ್ರಯತ್ನ ಗಳು ಸ್ವಾಗತಾರ್ಹ. ಆದರೆ ಕೆಲವು ಕಾಯಿದೆ ಮಸೂದೆಗಳ ಬಗ್ಗೆ ಎಲ್ಲಿಲ್ಲದ ಸಂಶಯ, ಆತಂಕ, ಪ್ರತಿರೋಧಗಳು ಏಳುತ್ತಿರುವುದು ದುರದೃಷ್ಟಕರ. ಇತ್ತೀಚಿಗಿನ ರಾಷ್ಟ್ರೀಯ ಬೀಜ ಮಸೂದೆ 2004, ಇದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ. ಈ ದ್ವಂದ್ವಗಳತ್ತ ಗಮನಹರಿಸಿ ಪರಿಹಾರ ಹುಡುಕುವುದು ಇಂದು ಅತ್ಯವಶ್ಯಕವಾಗಿದೆ.

ಆದರೆ, ಈ ಹಿಂದೆ 2002 ರಲ್ಲಿ ಹೊರಬಂದ 'ಸಸ್ಯತಳಿ ರಕ್ಷಣೆ ಮತ್ತು ರೈತ ಹಕ್ಕಿನ ಕಾಯಿದೆ' ಹಾಗೇ ಇತ್ತೀಚಿಗೆ ಬಂದಿರುವ 'ಪರಿಶಿಷ್ಟ ಪಂಗಡಗಳ (ಅರಣ್ಯ ಮೇಲಿನ ಹಕ್ಕಿನ ಪರಿಗಣನೆ) ಕಾಯಿದೆ' ಮತ್ತು 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಮಸೂದೆ'ಗಳಿಗೆ ರೈತರು, ಗ್ರಾಮೀಣ ಸಮುದಾಯ, ಇವುಗಳನ್ನು ಪ್ರತಿನಿಧಿಸುವ ಸಂಘಸಂಸ್ಥೆ ಮತ್ತು ವ್ಯಕ್ತಿಗಳಿಂದ ಸಕಾರಾತ್ಮಕ ಪ್ರತಿಕ್ರಿಯೆ ಬಂದಿರುವುದು ಸ್ವಾಗತಾರ್ಹ. ಹೀಗೆ ಜನಪರ ಕಾಯಿದೆ ಕಾನೂನು ಮತ್ತು ಕಾರ್ಯಕ್ರಮಗಳು ರೂಪಿತವಾಗಿ ಅವು ಯೋಗ್ಯ ರೀತಿಯಲ್ಲಿ ಅನುಷ್ಠಾನಗೊಳ್ಳುವಂತೆ ಮಾಡುವುದೇ ಈ ದೇಶದ ಮುಂದಿರುವ ದೊಡ್ಡ ಸವಾಲು. ಈ ನಿಟ್ಟಿನಲ್ಲಿ ಹಲವಾರು ಸಲಹೆ ಸೂಚನೆಗಳು ಮುಂದಿದ್ದು ಅವುಗಳಲ್ಲಿ ಈ ಕೆಳಗಿನ ಮೂರರತ್ತ ಗಮನ ಹರಿಸುವುದು ಇಂದು ಅವಶ್ಯಕವಾಗಿದೆ.

(1) ಗ್ರಾಮೀಣ ವ್ಯವಸ್ಥೆಗೆ ಸಂಬಂಧಿಸಿದ ಎಲ್ಲಾ ವಿಚಾರಗಳ ಮೇಲೆ ನೀತಿ, ಕಾಯಿದೆ ರೂಪಿಸುವ ಪ್ರಕ್ರಿಯೆ ಪಾರದರ್ಶಕವೂ, ವಿಕೇಂದ್ರೀಕೃತ ಮತ್ತು ಜನತಂತ್ರಾತ್ಮಕವೂ ಆಗಿದ್ದು ಇದರಲ್ಲಿ ಸಂಬಂಧಿಸಿದ ಎಲ್ಲಾ ತಳಮಟ್ಟದ ವಾರಸುದಾರರೂ *(Grassroots Stakeholders)* ಪಾಲ್ಗೊಳ್ಳುವಂತಿರಬೇಕು.

(2) ಈಗಾಲೇ ಹೊರ ಬಂದಿದ್ದು ತೀವ್ರ ವಿವಾದಕ್ಕೆ ಎಡೆಮಾಡಿಕೊಟ್ಟಿರುವ ಜೈವಿಕ ತಂತ್ರಜ್ಞಾನ ನೀತಿ, ಬೀಜ ಮಸೂದೆಗಳಂತಹ ವಿಚಾರಗಳಲ್ಲಿ ರೈತರು, ಸಮುದಾಯ ಪ್ರತಿನಿಧಿಗಳು, ತಜ್ಞರು, ಮತ್ತಿತರರು ಸೇರಿ ಪರ್ಯಾಯ ನೀತಿಗಳನ್ನು ನಿರೂಪಿಸಿ ರಾಷ್ಟ್ರವ್ಯಾಪ್ತಿ ಚರ್ಚೆಗೆ ಒಳಪಡಿಸಬೇಕು.

.......ಪುಟ 13 ಕ್ಕೆ

ಈರುಳ್ಳಿ ಸಂಗ್ರಹಣಾ ವಿಧಾನ

ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಮಹದೇವ ಅಂಬಲಿಯವರು ಈರುಳ್ಳಿಯನ್ನು ಐದಾರು ತಿಂಗಳ ಕಾಲ ಸಂಗ್ರಹಿಸಲು ಒಂದು ಸರಳ ವಿಧಾನವನ್ನು ಕಂಡು ಕೊಂಡಿದ್ದಾರೆ. ಈರುಳ್ಳಿಯನ್ನು ಕೊಯಲಿನ ಸಮಯದಲ್ಲಿ ಬೆಲೆ ತುಂಬಾ ಕಡಿಮೆಯಿದ್ದಾಗ ಈ ವಿಧಾನದಿಂದ ಸಂಗ್ರಹಿಸಿ ಮತ್ತೆ ಹೆಚ್ಚಿನ ಬೆಲೆ ಸಿಕ್ಕಾಗ ವಿಲೇವಾರಿ ಮಾಡುವುದು ಇವರ ಉದ್ದೇಶ. ಬಿಜಾಪುರ ಭಾಗದ ಹಲವು ರೈತರು ಈ ಕ್ರಮ ಅನುಸರಿಸುತ್ತಿರುವುದಾಗಿ ತಿಳಿದುಬಂದಿದ್ದು ಈ ಬಗ್ಗೆ ವಿವರ ಕೆಳಗೆ ಕೊಡಲಾಗಿದೆ.

ಮೊದಲು ಸಂಗ್ರಹಿಸಲು ಸೂಕ್ತವಾದ ಸ್ಥಳವನ್ನು ಆಯ್ಕೆ ಮಾಡಬೇಕು. ಅದು ಎತ್ತರದಲ್ಲಿದ್ದು ನೆರಳಿರುವ ಜಾಗವಾಗಿರಬೇಕು. ತಮಗೆ ಬೇಕಾಗಿರುವಷ್ಟು ವಿಸ್ತೀರ್ಣದ ಜಾಗದಲ್ಲಿ ಕಲ್ಲುಗಳನ್ನು ಹಾಕಬೇಕು. ಅದರ ಮೇಲೆ ಮರಳನ್ನು ಒಂದು ಇಂಚು ಗಾತ್ರದಷ್ಟು ಹಾಕಬೇಕು, (ನೀರಿದ್ದರೆ ಮರಳಿನ ಮುಖಾಂತರ ಬಸಿದು ಹೋಗಲು). ನಂತರ ನಾಲ್ಕು ಮೂಲೆಗಳಲ್ಲಿ ಕಂಬಗಳನ್ನು ನೆಟ್ಟು, ಸುತ್ತಲು ತೊಗರಿ ಗಿಡದ ಕಡ್ಡಿ ಅಥವಾ ಬೇರೆ ಯಾವುದಾದರೂ ಕಡ್ಡಿಗಳಿಂದ ಮುಚ್ಚಬೇಕು. ನಾಲ್ಕು ಕಂಬಗಳ ಮೇಲ್ಭಾಗದಲ್ಲಿ ಸಿಮೆಂಟಿನ ಅಥವಾ ಲೋಹದ ಹಾಳೆಗಳನ್ನು ಅಳವಡಿಸಬೇಕು. ಅದರ ಮೇಲೆ ತೆಂಗಿನ ಗರಿಗಳು ಅಥವಾ ಬೇರೆ ಯಾವುದಾದರು ಸೊಪ್ಪನ್ನು ಹರಡಬೇಕು. ಇದು ಈರುಳ್ಳಿಯನ್ನು ಬಿಸಿಲು, ಮಳೆ, ಗಾಳಿಯಿಂದ ರಕ್ಷಿಸುತ್ತದೆ. ಹೀಗೆ ಈರುಳ್ಳಿ ಸಂಗ್ರಹಿಸುವ ಮನೆ ನಿರ್ಮಾಣವಾಗುತ್ತದೆ.

ಜನವರಿಯಿಂದ ಮಾರ್ಚ್‌ವರೆಗೆ ಬೆಳೆದ ಈರುಳ್ಳಿಯನ್ನು ಸಂಗ್ರಹಿಸುವುದು ಉತ್ತಮ. ಏಕೆಂದರೆ ಮುಂದಿನ ಆರು ತಿಂಗಳ ನಂತರ ಒಳ್ಳೆಯ ಬೆಲೆ ದೊರೆಯುತ್ತದೆ. ಕಟಾವು ಮಾಡಿದ ಈರುಳ್ಳಿ ಎಲೆಗಳನ್ನು ತೆಗೆದು 15 ದಿನಗಳ ಕಾಲ ನೆರಳಿನಲ್ಲಿ ಒಣಗಿಸಿಡಬೇಕು. ಆ ಸಮಯದಲ್ಲಿ ಕೊಳೆತ, ಪೆಟ್ಟಾಗಿರುವ, ಇನ್ನಿತರ ರೀತಿಯ ಸಂಗ್ರಹಣ ಯೋಗ್ಯವಲ್ಲದ ಈರುಳ್ಳಿಗಳನ್ನು ಬೇರ್ಪಡಿಸಿ ಉತ್ತಮವಾದವುಗಳನ್ನು ಸಂಗ್ರಹಣಾ ಮನೆಗೆ ಹಾಕಬಹುದೆನ್ನುತ್ತಾರೆ, ಮಹದೇವ್.

ಸಂಗ್ರಹ : ಮಹದೇವ.ಎ, ಬಿ.ಎಸ್ಸಿ (ಕೃಷಿ) ಜಿ.ಕೆ.ವಿ.ಕೆ. ಬೆಂಗಳೂರು

ಮಾವಿನ ಹಣ್ಣಿನಲ್ಲಿ ಹುಳುವಾಗದಿರಲು

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕು ಪಡ್ನೂರು ಕಂಬಾಡಿವಳಿಯ ಎಸ್. ವೆಂಕಟರಮಣ್ ಭಟ್ ಎಂಬುವರು ಮಾವಿನ ಹಣ್ಣಿನಲ್ಲಿ ಕಂಡುಬರುವ ಹುಳುಗಳ ನಿಯಂತ್ರಣಕ್ಕೆ ಸರಳ ಉಪಾಯವನ್ನು ಕಂಡುಕೊಂಡಿದ್ದಾರೆ. ಮಾವಿನ ಕಾಯಿಯನ್ನು ಮರದಿಂದ ಕಿತ್ತಾಗ ಬಿಸಿ ನೀರಿನಲ್ಲಿ ಸುಮಾರು ಹತ್ತು ನಿಮಿಷ ಮುಳುಗಿಸಿಡಬೇಕು. ಇತ್ತೀಚೆಗೆ ಸೇಡಿಯಾಪ್ ಜನಾರ್ಧನ್ ಭಟ್ ಎಂಬುವವರು ಈ ನಿಟ್ಟಿನಲ್ಲಿ ಪ್ರಯೋಗ ನಡೆಸಿ ನೀರು 65^0C ಬಿಸಿ ಇದ್ದರೆ ಉತ್ತಮ ಎಂದು ತಿಳಿಸಿರುವರು. ಮಾವಿನ ಕಾಯಿಗಳನ್ನು ಒಂದು ಪಾತ್ರೆಯಲ್ಲಿ ಹಾಕಿ ಅದಕ್ಕೆ ಬಿಸಿನೀರು ಎರೆಯುವುದು ಸುಲಭ ವಿಧಾನ. ಈ ರೀತಿ ಸಂಸ್ಕರಿಸಿದ ಮಾವಿನ ಹಣ್ಣಿನಲ್ಲಿ ಹುಳುವಾಗುವುದಿಲ್ಲ ಮತ್ತು ರುಚಿಯಲ್ಲೂ ಯಾವುದೇ ಬದಲಾವಣೆ ಆಗುವುದಿಲ್ಲ ಎಂಬುದು ವೆಂಕಟರಮಣ ಭಟ್ ಅವರ ಅಭಿಪ್ರಾಯ. *ಮೂಲ : ಅಡಿಕೆ ಪತ್ರಿಕೆ, ಆಗಸ್ಟ್ 2005 ಪು– 35*

ಬಾಳೆಯ ಗೊನೆಗಳಿಗೆ ರಕ್ಷಣಾ ಕವಚ



ಬಾಳೆಗೊನೆಗಳನ್ನು ಕೋತಿಗಳಿಂದ ರಕ್ಷಿಸಲು ರೈತರು ಚೀಲಗಳನ್ನು ಬಳಸುವುದು ರೂಢಿ. ಆದರೆ ಬಾಳೆಮರಗಳು ಮೃದುವಾಗಿರುವುದರಿಂದ ಏರುವುದು ಅಥಾವ ಏಣಿಯನ್ನು ಹಾಕುವುದು ಸಾದ್ಯವಿಲ್ಲ. ಈ ತೊಂದರೆ ನಿವಾರಿಸಲು ಸಾಗರ ತಾಲ್ಲೂಕು ಮಾವಿನಸರದ, ಎಂ.ಜಿ. ಸತ್ಯ ನಾರಾಯಣ ರಾವ್ ಎಂಬುವರು ಸರಳ ವಿಧಾನವನ್ನು ಕಂಡುಕೊಂಡಿರುವರು. ಚಿಕನ್‌ಮೆಷ್ ನಿಂದ ಬಾಳೆಗೊನೆಗೆ ಹೊದಿಸುವಷ್ಟು ಗಾತ್ರದ ಚೀಲವನ್ನು ತಯಾರಿಸಿಕೊಂಡು ಅದರ ಬಾಯಿಗೆ ಸೆರೆಗುಣಿಕೆಯನ್ನು ಅಳವಡಿಸಲಾಗುತ್ತದೆ. ಬಾಳೆಗೊನೆಯ ಮೂತಿಯನ್ನು ಕತ್ತರಿಸಿ ನಂತರ ಕವಲಿಗೆ ಬಾಯಿ ತೆರೆದ ಚೀಲದಲ್ಲಿ ಗೊನೆಯನ್ನು ತೂರಿಸಲು ಇದು ಸಹಕಾರಿಯಾಗಿದೆ. ಆಗ ಮಂಗಗಳು ಬಾಳೆಗೊನೆಯನ್ನು ನೋಡಬಹುದೇ ಹೊರತು ಕೈಹಾಕಲಾಗುವುದಿಲ್ಲ. ಕೇವಲ 7–8 ರೂಪಾಯಿಗಳಲ್ಲಿ ರೈತರು ತಮ್ಮ ಬಾಳೆಗೊನೆಗಳನ್ನು ರಕ್ಷಿಸಿಕೊಳ್ಳಬಹುದೆಂದು ಸತ್ಯನಾರಾಯಣ್ ರಾವ್ ಹೇಳುತ್ತಾರೆ.

ಭತ್ತದ ಸಸಿಗಳ ಶೀಘ್ರ ಬೆಳವಣಿಗೆ

ತಮಿಳು ನಾಡು ರಾಜ್ಯದ ಮುಗುಂದನ್ ಭತ್ತದ ಸಸಿಗೆ ರಾಸಾಯನಿಕ ಗೊಬ್ಬರದ ಬದಲಿಗೆ ಸಾವಯವ ಗೊಬ್ಬರ ಕೊಡಲು ನಿರ್ಧರಿಸಿದರು. ಮೊದಲು ಅವರು ಶೇಂಗ ಹಿಂಡಿ ಮತ್ತು ಆಕಳ ಮೂತ್ರವನ್ನು ಉಪಯೋಗಿಸಿದರು, ಅದು ಯಶಸ್ವಿಕಂಡಿತು. ನಂತರ 400. ಕೆ.ಜಿ. ಭತ್ತದ ಬೀಜವನ್ನು (ಹೊನ್ನಿ ತಳಿ) ಸಸಿ ಮಡಿ ಮಾಡಿ, ಬೆಳೆಸಲು ತಯಾರು ಮಾಡಿದರು. 12 ದಿನಕ್ಕಿಂತ ಮುಂಚೆ ಮುಗುಂದನ್ 10 ಕೆ.ಜಿ. ಶೇಂಗಹಿಂಡಿಯನ್ನು 20ಲೀ ಆಕಳ ಮೂತ್ರದಲ್ಲಿ ಎರಡು ದಿನದ ಮಟ್ಟಿಗೆ ನೆನೆಸಿದರು. ನಂತರ ಇದನ್ನು ಸಸಿಮಡಿ ನೀರಿನಲ್ಲಿ ಮಿಶ್ರಣ ಮಾಡುವ ವ್ಯವಸ್ಥೆಯನ್ನು ಮಾಡಿದರು. ಶೇಂಗಹಿಂಡಿ ಮತ್ತು ಆಕಳಮೂತ್ರ ಅವರಿಗೆ ಒಳ್ಳೆಯ ಫಲಿತಾಂಶ ಕೊಟ್ಟಿತು ಹಾಗೂ ಯೂರಿಯಾ ಗೊಬ್ಬರ ಹಾಕುವುದಕ್ಕಿಂತಲೂ ಒಳ್ಳೆಯ ಸಸಿಗಳು ಕಂಡು ಬಂದಿದೆಯಂತೆ.

ಮೂಲ : ಹನಿಬೀ 16(1) ಜನವರಿ–ಮಾರ್ಚ್ 2005, ಪು.21

ಪಟಾಕಿ ಬಂದೂಕು



ಮಳೆ, ಬೆಳೆ ಎಲ್ಲಾ ಚೆನ್ನಾಗಿದ್ದರೂ ಕೃಷಿಕರಿಗೆ ಮಂಗ, ಅಳಿಲು, ಹಂದಿ ಮುಂತಾದ ಪ್ರಾಣಿಗಳ ಕಾಟತಪ್ಪಿದ್ದಲ್ಲ. ತಮ್ಮ ಬೆಳೆಗಳ ರಕ್ಷಣೆಗಾಗಿ ದುಬಾರಿ ಬಂದೂಕುಗಳನ್ನು ಖರೀದಿಸುವುದು ಎಲ್ಲರಿಗೂ ಸಾಧ್ಯವಿಲ್ಲ ಹಾಗೂ ಇದಕ್ಕಾಗಿ ಅನುಮತಿ ಪಡೆಯುವ ರಗಳೆ ಇನ್ನೂ ಕಷ್ಟ.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಶೀಗೇಹಳ್ಳಿ ಕೊಪ್ಪದ ನಿವಾಸಿ ಶ್ರೀ ನಾಗೇಶ್ ಪಡಿಗೆರೆ ಇವರು ನಳಿಕೆಯಲ್ಲಿ ಹಾರಿಸಬಹುದಾದ ಪಟಾಕಿ ಬಂದೂಕನ್ನು ತಯಾರಿಸಿ ದ್ದಾರೆ. ಇದಕ್ಕೆ ಯಾವುದೇ ಲೈಸೆನ್ಸ್, ದುಬಾರಿ ಮದ್ದು ಗುಂಡುಗಳು ಏನೂ ಬೇಕಾಗಿಲ್ಲ. ಒಂದಿಷ್ಟು ಕಲ್ಲು ಚೂರುಗಳು ಹಾಗೂ ಪಟಾಕಿ ಸಿಡಿಮದ್ದುಗಳನ್ನು ಹಾಕಿ ಭದ್ರ ಪಡಿಸಿದರೆ ಸಾಕು . ಬೆಂಕಿ ಹಚ್ಚಲು ಪಟಾಕಿ ಬಾಂಬಿನ ದಾರ ಚಿಕ್ಕ ರಂಧ್ರದ ಮೂಲಕ ಹೊರ ಬಂದಿರಬೇಕು.

ತೆಂಗಿನ ಮರದಷ್ಟು ಎತ್ತರಕ್ಕೆ ಸಿಡಿಯುವ ಕಲ್ಲುಚೂರುಗಳು ಪ್ರಾಣಿಗಳನ್ನು ಸ್ವಲ್ಪ ಮಟ್ಟಿಗೆ ಗಾಯಮಾಡಿ ಹೆದರಿಸಿ ಓಡಿಹೋಗುವಂತೆ ಮಾಡಿದೆ. ಹಾಗೆ ಇದರೊಂದಿಗೆ ಉಂಟಾಗುವ ಶಬ್ದವು ಅಷ್ಟೇ ಪರಿಣಾಮಕಾರಿಯಾಗಿರುತ್ತದೆ.

ವೆನಿಲ್ಲಾ ಪಂಚ್

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ರವೀಂದ್ರ ಭಟ್ ಉತ್ತಮ ಕೃಷಿಕರು ಮತ್ತು ಡಿಪ್ಲೋಮಾ ಇಂಜಿನಿಯರ್ ಪಧವೀಧರರು. ಅವರು ಇಕ್ಕಳದಂತಹ ಒಂದು ಆಯುಧವನ್ನು ತಯಾರಿಸಿ ಅದರ ಮೂಲಕ ವೆನಿಲ್ಲಾ ಬಳ್ಳಿಯ ಎಲೆಗಳ ಮೇಲೆ ಪಂಚಿಂಗ್ ಮಾಡುವ ಹೊಸ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ಇದರಿಂದ ಎಲೆಗೂ ಬಳ್ಳಿಗೂ ಯಾವುದೇ ರೀತಿಯ ಹಾನಿಯಾಗುವುದಿಲ್ಲ ಎಂದು ಖಾತ್ರಿ ಪಡಿಸಿದ್ದಾರೆ.

ಇದರ ಉಪಯೋಗ ಪಡೆಯುವವರು ಒಂದು ಕೋಡ್ ಸಂಖ್ಯೆ ಅಥವಾ ಹೆಸರು ಅಥವಾ ಟೆಲಿಫೋನ್ ಸಂಖ್ಯೆ ಒಟ್ಟಾರೆ ಯಾವುದೇ ರೀತಿಯ ಗುರುತನ್ನು ರವೀಂದ್ರ ಅವರಿಗೆ ಕೊಟ್ಟರೆ ಅವರು ಪಂಚಿಂಗ್ ಮಾಡುವ ಇಕ್ಕಳವನ್ನು ಸಿದ್ಧ ಪಡಿಸಿಕೊಡುತ್ತಾರೆ. ಯಲ್ಲಾಪುರ ತಾಲೂಕಿನ ಬಹುತೇಕ



ರೈತರು ಈ ಇಕ್ಕಳದ ಪ್ರಯೋಜನ ಪಡೆದಿದ್ದಾರೆ ಎಂದು ರವೀಂದ್ರ ಭಟ್ ತಿಳಿಸಿದ್ದಾರೆ. ಈ ವಿಧಾನದಿಂದ ಬಳ್ಳಿಯನ್ನು ಕಳವು ಮಾಡಿದ ಆರೋಪಿಯನ್ನು ಹಿಡಿಯುವುದು ಅತ್ಯಂತ ಸುಲಭವಾಗುತ್ತದೆ ಎನ್ನುವುದು ರವೀಂದ್ರ ಅವರ ಅಭಿಪ್ರಾಯ. ಆಸಕ್ತ ರೈತರು ದೂರವಾಣಿ 08419 : 2412247, ಅಥವಾ ಮೊಬೈಲ್ : 9845875161 ಮೂಲಕ ಸಂಪರ್ಕಿಸಬಹುದು.

ಎರಡು ಗ್ರಾಮೀಣ ಒಲೆಗಳು

(1) ಇಂಧನ ಉಳಿತಾಯ ಮತ್ತು ಪರಿಸರ ಮಾಲಿನ್ಯದ ಬಗ್ಗೆ ಯೋಚಿಸುತ್ತಿರುವ ಈ ಕಾಲದಲ್ಲಿ ಇದಕ್ಕೆ ಪರಿಹಾರೋಪವಾಗಿ ಗ್ರಾಮೀಣ ಪದವೀಧರರಿಬ್ಬರು ಸಂಶೋಧಿಸಿರುವ ಎರಡು ಬಗೆಯ ಒಲೆಗಳ ವಿವರ ಇಲ್ಲಿದೆ.



ಬೆಳಗಾವಿಯ ರಾಯಭಾಗ ತಾಲೂಕಿನ ಚಿಂಚಲಿ ಗ್ರಾಮದ ಕಲ್ಮೇಶ್ ಕಂಬಾರ ಬಿ.ಎ.,ಬಿ.ಇಡಿ., ಪದವೀಧರರಾಗಿದ್ದಾರೆ. ಇವರು ಮೂರು ವರ್ಷಗಳ ಸತತ ಪರಿಶ್ರಮದಿಂದ ಹೊಗೆ ರಹಿತ ಅಡುಗೆ ಒಲೆ ಒಂದನ್ನು ತಯಾರಿಸಿದ್ದಾರೆ. ಸುಟ್ಟ ಇಟ್ಟಿಗೆ ಪುಡಿ, ಸಿಮೆಂಟ್ ಹಾಗೂ ಕಬ್ಬಿಣದ ಸಲಾಕೆಗಳನ್ನು ಬಳಸಿ ಈ ಒಲೆಯನ್ನು ತಯಾರಿಸಿದ್ದಾರೆ. ಕಡಿಮೆ ಸ್ಥಳದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಇದನ್ನು ಶೀಘ್ರಸ್ಥಾಪನೆ ಮಾಡಬಹುದೆನ್ನುತ್ತಾರೆ. ಒಲೆ ತಯಾರಿಸಲು ತಗಲುವ ವೆಚ್ಚ 150 ರಿಂದ 200ರೂ.ಗಳು ಎನ್ನುತ್ತಾರೆ ಕಲ್ಮೇಶ್.

ಈ ಒಲೆಗಳನ್ನು ಬಿಜಾಪುರ, ಬೆಳಗಾವಿ, ಬಾಗಲಕೋಟೆ, ಗುಲ್ಬರ್ಗಾ ಜಿಲ್ಲೆಗಳ ಹಲವಾರು ಗ್ರಾಮಗಳಲ್ಲಿ ಅಳವಡಿಸಿ ಗ್ರಾಹಕರ ಮೆಚ್ಚುಗೆ ಗಳಿಸಿದ್ದಾರೆ. ಜೊತೆಗೆ ಬಿಜಾಪುರ ಜಿಲ್ಲೆ ಕಿಲ್ಲಾರಟ್ಟಿ ಗ್ರಾಮದಲ್ಲಿ ನಡೆದ ಅಖಿಲ ಕರ್ನಾಟಕ ಒಲೆಯ ಉತ್ಪಾದಕರ ಸಮ್ಮೇಳನದಲ್ಲಿ ಕಲ್ಮೇಶ್‌ರ ಒಲೆ ಪ್ರಶಸ್ತಿಯೊಂದಿಗೆ ಪ್ರಥಮ ಸ್ಥಾನ ಪಡೆದಿದೆ. ಒಲೆಗಳನ್ನು ಗ್ರಾಮೀಣ ಜನತೆಗೆ ಪೂರೈಕೆ ಮಾಡುವಂತೆ ಕರ್ನಾಟಕ ಸರ್ಕಾರದಿಂದ ಪುರಸ್ಕಾರವನ್ನು ಪಡೆದಿರುತ್ತಾರೆ.

ಈ ಒಲೆಗಳ ಕುರಿತು ಹೆಚ್ಚಿನ ಮಾಹಿತಿಗೆ ಶ್ರೀಕಲ್ಮೇಶ್‌ರವರನ್ನು ದೂರವಾಣಿ ಮೂಲಕ – *0831 – 237942* ಸಂಪರ್ಕಿಸಬಹುದು.

(2) ಇದೇ ರೀತಿ ಬೆಂಗಳೂರು ಜಿಲ್ಲೆ ದೇವನಹಳ್ಳಿ ತಾಲೂಕು ವಿಜಯಪುರದ ವಿ.ಸಿ. ರಮೇಶ್ ಅವರು ಬಿ. ಎಸ್ಸಿ., ಪದವೀಧರರಾಗಿದ್ದಾರೆ. ಇವರ ತೋಟದ ತ್ಯಾಜ್ಯವೆಲ್ಲ ನೀರು ಕಾಯಿಸಲು ಬರಿದಾಗುತ್ತಿತ್ತಂತೆ. ಇದಕ್ಕೆ ಪರಿಹಾರೋಪವಾಗಿ ಹಲವು ಪ್ರಯತ್ನಗಳ ಮೂಲಕ ತಮ್ಮದೇ ಆದ ನೀರು ಕಾಯಿಸುವ ನೂತನ ಹಂಡೆ ಮತ್ತು ಇದಕ್ಕೆ ಹೊಂದಿಕೊಳ್ಳುವ ಮತ್ತೊಂದು ಒಲೆಯನ್ನು ರೂಪಿಸಿರುತ್ತಾರೆ.

50 ಲೀಟರ್ ಸಾಮರ್ಥ್ಯದ ತಾಮ್ರದ ಹಂಡೆಗೆ ಓವರ್‌ಹೆಡ್ ಟ್ಯಾಂಕಿನಿಂದ ನೀರು ನೇರವಾಗಿ ಬರುವಂತೆ ಮಾಡಿದ್ದಾರೆ. ಎರಡು ಕಿಲೋ ಸೌದೆಯಲ್ಲಿ ಐದಾರು ಜನ ಸ್ನಾನ ಮಾಡುವಷ್ಟು ನೀರು ಹತ್ತೇ ನಿಮಿಷದಲ್ಲಿ ಬಿಸಿಯಾಗುತ್ತದೆ. ಈ ರೀತಿಯ ಒಲೆಯಿಂದ ಹಂಡೆಯಲ್ಲಿ ನೀರು 48 ಗಂಟೆಗಳ ಕಾಲ ಬಿಸಿಯಾಗಿಯೇ ಇರುತ್ತದೆ. ಸ್ನಾನದ ಮನೆ ಶುಚಿಯಾಗಿರುತ್ತದೆ ಹಾಗೂ ಇದಕ್ಕೆ ಶವರ್ ಕೂಡ ಅಳವಡಿಸಿಕೊಳ್ಳಬಹುದೆನ್ನುತ್ತಾರೆ ರಮೇಶ್. ಇದರ ವೆಚ್ಚ ತಾಮ್ರದ ಹಂಡೆ ಸೇರಿ ಎರಡು ಸಾವಿರ ರೂಗಳು.

ಎರಡು ವರ್ಷಗಳಿಂದೀಚೆಗೆ 150 ಕ್ಕೂ ಹೆಚ್ಚು ಇಂತಹ ಒಲೆಗಳನ್ನು ಇವರ ಸುತ್ತಮುತ್ತಲ ಊರುಗಳಲ್ಲಿ ನಿರ್ಮಿಸಿಕೊಟ್ಟಿರುತ್ತಾರಂತೆ ಹಾಗೂ ಬೆಂಗಳೂರು ನಗರದ ಪೋಲಿಸ್ ಅಧಿಕಾರಿಯೊಬ್ಬರಿಗೂ ನಿರ್ಮಿಸಿಕೊಟ್ಟಿದ್ದು ಅವರು ಇದರ ಬಗ್ಗೆ ತುಂಬಾ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆಂದು ರಮೇಶ್ ಹೇಳುತ್ತಾರೆ.

ನೂತನ ತಂತ್ರಜ್ಞಾನವನ್ನು ಅಳವಡಿಸಿ ಅಭಿವೃದ್ಧಿಪಡಿಸಲಾದ ಈ ಒಲೆಗಳನ್ನು ಉಪಯೋಗಿಸುವುದರಿಂದ ಶೇಕಡಾ 40ರಿಂದ 50 ರಷ್ಟು ಉರುವಲನ್ನು ಉಳಿಸಬಹುದೆನ್ನುತ್ತಾರೆ. ಉರುವಲಾಗಿ ಬಳಸುವ ಎಲ್ಲಾ ರೀತಿಯ ತ್ಯಾಜ್ಯಗಳನ್ನು ಇದಕ್ಕೆ ಬಳಸಬಹುದು. ಈ ಒಲೆಗಳು ಶಾಖವನ್ನು ಹೊರಗೆ ಬಿಡುವುದಿಲ್ಲ ಹಾಗೂ ಹೊಗೆ ರಹಿತವಾಗಿರುತ್ತವೆ. ದೀರ್ಘಕಾಲ ದುರಸ್ತಿರಹಿತ ಬಾಳಿಕೆ ಬರುವ, ಅಡುಗೆ ಮಾಡುವ ಮತ್ತು ನೀರು ಕಾಯಿಸುವ



ಒಲೆಗಳಿವು ಎನ್ನುತ್ತಾರೆ ರಮೇಶ್. ಈ ಒಲೆಗಳನ್ನು ಜನತೆಗೆ ಪೂರೈಕೆ ಮಾಡುವಂತೆ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಸಿಕ್ಕಿದೆಯೆಂತೆ.

ಹೆಚ್ಚಿನ ಮಾಹಿತಿಗೆ ರಮೇಶ್‌ರವರನ್ನು ದೂರವಾಣಿ : 080–7665434, ಮೊಬೈಲ್ : 9448713701 ಸಂಪರ್ಕಿಸಬಹುದು.

ಪಂಕ್ಚರ್ ಕಿಟ್

ಹಾಸನ ಜಿಲ್ಲೆ ಅರಸಿಕೆರೆ ತಾಲ್ಲೂಕು ಗಂಡಸಿಯ ನಾಗೇಂದ್ರ ಮತ್ತು ರವಿಕುಮಾರ್ ಎಂಬ ಸಹೋದರರು ನಡುರಸ್ತೆಯಲ್ಲಿ ವಾಹನಗಳ ಚಕ್ರಗಳು ಪಂಕ್ಚರ್ ಆದರೆ ತುರ್ತಾಗಿ ವಾಹನದ ಸಹಾಯದಿಂದಲೆ ಪಂಕ್ಚರ್ ಆದ ಟ್ಯೂಬ್‌ಗೆ ಗಾಳಿ ತುಂಬಿ ದುರಸ್ಥಿ ಮಾಡಬಹುದಾದ ಸಾಧನ ಒಂದನ್ನು ಕಂಡು ಹಿಡಿದಿರುವರು. ಈ ಸಾಧನವನ್ನು ಇಂಜಿನ್‌ಗೆ ಅಳವಡಿಸಿ ನಡುರಸ್ತೆಯಲ್ಲೇ ಪಂಕ್ಚರ್ ಹಾಕಿ ಪ್ರಯಾಣವನ್ನು ಮುಂದುವರೆಸಬಹುದಾಗಿದೆ. ಟಯರ್ ಪಂಕ್ಚರ್ ಆದರೆ ಅದನ್ನು ಬಿಚ್ಚಿ ಇಂಜಿನ್ ಸಹಾಯದಿಂದ ಅದಕ್ಕೆ ಗಾಳಿ ತುಂಬುವುದು ಹೇಗೆ ಎಂಬುದನ್ನು ಅತ್ಯಂತ ಸರಳವಾಗಿ ಹಾಸನದ ವಿವಿಧೆಡೆ ಪ್ರದರ್ಶಿಸಿದ್ದಾರೆ. ಮೂರು ನೂರು ರೂ. ಬಾಳುವ ಅತೀ ಚಿಕ್ಕದಾದ ಈ ಸಾಧನವನ್ನು ಬೈಕ್‌ನಲ್ಲೇ ಇರಿಸಿಕೊಂಡರೆ ನಿರಾಂತಕವಾಗಿ ಪಂಕ್ಚರ್ ಹಾಕಬಹುದು ಎನ್ನುತ್ತಾರೆ ಈ ಸಹೋದರರು.

ಅಡಿಕೆ ಹಾಳೆ ಸಿಗಿಯುವ ಯಂತ್ರ

ಬಂಟ್ವಾಳ ತಾಲ್ಲೂಕು ಕುಳ್ಳಜೆಮನೆ ಗ್ರಾಮದ ಜಯಗೋವಿಂದ ಭಟ್ ಎಂಬುವರು ಅಡಿಕೆ ಹಾಳೆ ಸಿಗಿಯುವ ಯಂತ್ರವನ್ನು ಕಂಡುಹಿಡಿದಿದ್ದಾರೆ. ಅಡಿಕೆಯ ಹಾಳೆಯನ್ನು ಈ ಪ್ರದೇಶದಲ್ಲಿ ದನಕರುಗಳಿಗೆ ಮೇವಾಗಿಯೂ ಬಳಸುತ್ತಿರುವುದರಿಂದ ಅದನ್ನು ಸಣ್ಣತುಂಡಾಗಿ ಕತ್ತರಿಸುವುದು ಅನಿವಾರ್ಯ. ಭಟ್ ಅವರು ಅರ್ಧ H.P. ಮೋಟಾರು ಅಳವಡಿಸಿರುವ, ಚಕ್ರದಂತಹ 13 ಸಾ ಬ್ಲೇಡುಗಳನ್ನು ಬಳಸಿ ಈ ಯಂತ್ರವನ್ನು ತಯಾರಿಸಿದ್ದಾರೆ. ಅಡಿಕೆ ಹಾಳೆಯನ್ನು ಒಂದು ಕಡೆಯಿಂದ ನಿಧಾನವಾಗಿ ತಳ್ಳಿದಾಗ ಬ್ಲೇಡುಗಳ ಮೂಲಕ ಹಾಳೆ ಒಂದು ಇಂಚಿನಷ್ಟು ಅಗಲಕ್ಕೆ ಸಿಗಿಯುತ್ತಾ ಎದುರು ಬದಿಯಿಂದ ಹೊರಕ್ಕೆ ಬರುತ್ತದೆ. ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾದಾಗ ಹಾಳೆಯನ್ನು ಸಿಗಿದು ಮೂರು ದಿನ ಚೆನ್ನಾಗಿ ಒಣಗಿಸಿ ದಾಸ್ತಾನು ಇಟ್ಟು , ಒಣ ಹುಲ್ಲಿನ ಬದಲಿಗೆ ಇದನ್ನು ದಾರಾಳವಾಗಿ ಉಪಯೋಗಿಸಬಹುದು ಎಂದು ಭಟ್ ಹೇಳುತ್ತಾರೆ.

ಸ್ವಯಂಚಾಲಿತ ಅಡಿಗೆ ಅನಿಲವನ್ನು ಬಂದ್ ಮಾಡುವ ಯಂತ್ರ

ಧಾರವಾಡದ ಗುಲಗಂಜಿಕೊಪ್ಪದ ದಾವಲಸಾಬ ಮಹಮ್ಮದ್ ಗೌಸ್ ಲಾಡಮ್ಮ ಎಂಬುವರು ಅಡುಗೆ ಅನಿಲ ಬಂದ್ ಮಾಡುವ ಸ್ವಯಂಚಾಲಿತ ಸಾಧನವನ್ನು ಕಂಡು ಹಿಡಿದಿದ್ದಾರೆ. ಇದನ್ನು ಸೋಲಾರ್ (ಸೆಲ್ಸ್)ಕೋಶ, ಡಿಜಿಟಲ್ ಪರದೆ, 4 ಎ. ಸಿ. ಮೋಟರು, ಕಟ್ಟಿಗೆ, ಫೈಬರ್ ಪೆಟ್ಟಿಗೆ, ತೆಳುವಾದ ತಾಮ್ರದ ತಂತಿ ಮತ್ತು ಬ್ಯಾಟರಿಗಳನ್ನು ಬಳಸಿ ತಯಾರಿಸಿದ್ದಾರೆ. ಇದರಲ್ಲಿ ಅಡುಗೆ ಮಾಡಲು ಎಷ್ಟು ಕಾಲ ಬೇಕೋ, ಅಷ್ಟು ಕಾಲವನ್ನು ಮೊದಲೇ ನಿರ್ಧರಿಸಿ ಅಲರಾಮ್ ಇಡಬಹುದು. ಇಟ್ಟ ಸಮಯ ಮುಗಿದ ನಂತರ ಅನಿಲ ತಾನಾಗಿಯೇ ಬಂದ್ ಆಗುವುದು. ಅಲ್ಲದೆ ಅಲರಾಮ್ ಹೊಡೆಯುವುದು. ಇದು ಮುಖ್ಯವಾಗಿ ಇಂಧನ, ಹಣ, ಸಮಯ, ಶ್ರಮವನ್ನು ಉಳಿಸುತ್ತದೆಯಲ್ಲದೆ ಅನಿಲ ಸೋರಿಕೆಯಿಂದ ಉಂಟಾಗುವ ಅನಾಹುತಗಳನ್ನು ತಪ್ಪಿಸುತ್ತದೆ. ಆದ್ದರಿಂದ ಅಡುಗೆ ಮಾಡುವವರು ಆ ಕೆಲಸದ ಜೊತೆ ಜೊತೆಗೆ ಬೇರೆ ಕೆಲಸ ಗಳನ್ನು ಮಾಡಿಕೊಳ್ಳಬಹುದಾಗಿದೆ. ಇದನ್ನು ತಯಾರಿಸಲು ರೂ. 600ಗಳು ವ್ಯಯವಾಗುತ್ತದೆಯೆಂದು ದಾವಲಸಾಬ ಹೇಳುತ್ತಾರೆ.

ಮಡಿಕೆಯ ಡ್ರೈಯರ್

ಮಳೆಗಾಲದಲ್ಲಿ ಅಡುಗೆಗೆ ಬಳಸಿ ಉಳಿದ ಹಸಿಕೊಬ್ಬರಿ ಮುಂತಾದ ವಸ್ತುಗಳನ್ನು ಒಣಗಿಸದಿದ್ದರೆ ಅವು ಎರಡೇ ದಿನಗಳಲ್ಲಿ ಕೆಡುತ್ತದೆ. ಈ ಸಮಸ್ಯೆಗೆ ಪರಿಹಾರವಾಗಿ ಪುತ್ತೂರಿನ ಕರುಣಾಕರ್ ಅವರು ಒಂದು ಮಡಿಕೆಯ ಡ್ರೈಯರ್‌ನ್ನು ಕಂಡು ಹಿಡಿದಿದ್ದಾರೆ. ಒಂದು ವಿಶೇಷ ವಿನ್ಯಾಸದ ಮಡಿಕೆಯಲ್ಲಿ ಇಡಲು ಸರಿಹೊಂದುವಂತೆ ಲೋಹದ ತಂತಿಯಿಂದ ಸ್ಟ್ಯಾಂಡನ್ನು ತಯಾರಿಸಿ, ಈ ಮಡಿಕೆ ಡ್ರೈಯರ್‌ನ್ನು ಸಿದ್ದ ಪಡಿಸಿರುವುದಾಗಿ ಕರುಣಾಕರ್ ಹೇಳುತ್ತಾರೆ.

ಸ್ಟ್ಯಾಂಡಿನಲ್ಲಿ ಕೊಬ್ಬರಿಯ ಚೂರುಗಳನಿಟ್ಟು ಅದನ್ನು ಮಡಿಕೆಯೊಳಗೆ ಕೂರಿಸಿ, ಅಡಿಗೆಮಾಡಿದ ನಂತರ ಖಾಲಿಯಿರುವ ಸಮಯದಲ್ಲಿ ಉಳಿದ ಬೆಂಕಿಯ ಒಲೆಯ ಮೇಲೆ ಈ ಡ್ರೈಯರ್‌ನ್ನು ಇಡಬೇಕು. ಈ ರೀತಿ ಎರಡು ಮೂರು ದಿನಗಳಲ್ಲಿ ಒಣಗಿದ ಕೊಬ್ಬರಿ ತಯಾರಾಗುತ್ತದೆಯೆಂದು ಕರುಣಾಕರ್ ತಿಳಿಸಿದ್ದಾರೆ. ದೂರವಾಣಿ ಸಂಖ್ಯೆ : 08251 – 231896

ಹಿಪ್ಪುನೇರಳೆ ಕಟಾವು ಯಂತ್ರ

ಬಿಜಾಪುರ ಜಿಲ್ಲಾ ಬಾಗಲಕೋಟೆ ತಾಲೂಕು ಗುಳೇದ ಗುಡ್ಡದ ಶಿವಸಂಗಪ್ಪ ನಾರಾ ರೇಷ್ಮೆ ಕೃಷಿಕರು ಹಾಗೂ ಶಿಕ್ಷಕರು. ಅಕ್ಷರ ಕಲಿಸುವ ಐವತ್ತೂರರ ವಯಸ್ಸಿನ ಮೇಷ್ಟ್ರು. ಇವರು ಒಂದು ವಿದ್ಯುತ್ ಚಾಲಿತ ಹಿಪ್ಪು ನೇರಳೆಗಿಡ ಕತ್ತರಿಸುವ ಯಂತ್ರವನ್ನು ಆವಿಷ್ಕರಿಸಿರುತ್ತಾರೆ.



ಬಹುತೇಕ ರೇಷ್ಮೆ ಕೃಷಿಕರು ಈ ಕೆಲಸಕ್ಕೆ ಕೃಷಿ ಕಾರ್ಮಿಕರನ್ನು ಅವಲಂಬಿಸಿರುತ್ತಾರೆ. ಆದರೆ ಕೆಲವೊಮ್ಮೆ ಅಗತ್ಯ ಸಂದರ್ಭಗಳಲ್ಲಿಯೇ ಕೃಷಿ ಕಾರ್ಮಿಕರ ಕೊರತೆ ಕಾಡುತ್ತದೆ. ಅದೂ ಅಲ್ಲದೆ ಕುಡಗೋಲಿನಿಂದ ಕತ್ತರಿಸುವಾಗ ರೆಂಬೆಗಳ ತುದಿ ಸೀಳಿ ಅದರ ಮೇಲಿನ ತೊಗಟೆ ಸುಲಿಯುತ್ತದೆ. ಇದರಿಂದ ಸೊಪ್ಪಿನ ಇಳುವರಿಯು ಕುಂಠಿತವಾಗಿ ಬೆಳೆಯಲ್ಲಿ ನಷ್ಟವಾಗುತ್ತದೆ.

ಶಿವಸಂಗಪ್ಪ ನಾರಾ ಆವಿಷ್ಕರಿಸಿದ ಈ ಯಂತ್ರದಿಂದ ಒಂದು ನಿಮಿಷದಲ್ಲಿ ಐದು ಗಿಡಗಳನ್ನು ಕತ್ತರಿಸಬಹುದು. ಅಂದರೆ ಒಂದು ಎಕರೆ ಪ್ರದೇಶದ ಗಿಡಗಳನ್ನು 11 ಗಂಟೆಗಳಲ್ಲಿ ಕತ್ತರಿಸಬಹುದು. ಹಾಗೆಯೇ ಕಳೆ, ಕಬ್ಬು, ಸೂರ್ಯಕಾಂತಿ, ಜೋಳದ ದಂಟು, ಹತ್ತಿಗಿಡ, ಬದುವಿನಲ್ಲಿ ಬೆಳೆದಿರುವ ಗಿಡಗಂಟೆ, ಜಮೀನಿನ ಸುತ್ತ ಬೆಳೆದ ಹುಲ್ಲು ಇತ್ಯಾದಿಗಳನ್ನು ಕತ್ತರಿಸಲೂ ಈ ಯಂತ್ರವನ್ನೂ ಬಳಸಬಹುದಾಗಿದೆ. ಈ ಯಂತ್ರದ ಬಳಕೆಯಿಂದ ಸಮಯದ ಉಳಿತಾಯ, ಆಳಿನ ಖರ್ಚು ಉಳಿಕೆ, ಮತ್ತು ದೈಹಿಕ ಶ್ರಮ ಕಡಿಮೆಯಾಗುತ್ತದೆ. ಸಸ್ಯದ ಕಾಂಡ ಸೀಳುವುದಿಲ್ಲ. ಕಾಂಡದ ಸಿಪ್ಪೆ ಸುಲಿಯದೆ ಸಮವಾಗಿ ಕತ್ತರಿಸುವುದರಿಂದ ವರ್ಷದಲ್ಲಿ ಬೆಳೆಗಳ ಸಂಖ್ಯೆ ಹೆಚ್ಚುವುದು ಎಂದು ಸಂಗಪ್ಪ ಶಿವಸಂಗಪ್ಪ ನಾರಾ ವಿವರಿಸುತ್ತಾರೆ.

ಎರಡು ದೇಶೀಯ ಶೀತಕಗಳು

ಶ್ರೀ ಪ್ರಸಾದರ ಶೀತಕ

ಬೇಸಿಗೆಯ ಬಿಸಿಲಿಗೆ ಜನರು ತಂಪು ಪಾನೀಯ ಗಳ ಮೊರೆ ಹೋಗುತ್ತಾರೆ. ಅಲ್ಲದೆ ತರಕಾರಿ, ಹಣ್ಣು, ಹಾಲು, ಮೊಟ್ಟೆ ಮುಂತಾ ದವುಗಳು ಬೇಗನೆ ಬಾಡುವುದು / ಕೆಡುವುದು ಸಾಮಾನ್ಯ. ಪಾನೀಯ ಗಳನ್ನು ತಣ್ಣಗಿಡುವ ಹಾಗೂ ತರಕಾರಿಗಳನ್ನು ತಾಜಾ ಆಗಿರಲು ಬಳಸುವ ಸಾಧನವೇ ರೆಫ್ರಿಜ ರೇಟರ್. ಇದು ಕಾರ್ಯ ನಿರ್ವ ಹಿಸಲು ಹೆಚ್ಚಿನ ವಿದ್ಯುತ್ ಹಾಗೂ ಖರೀದಿಸಲು ಹೆಚ್ಚು ಹಣ ಬೇಕಾಗುತ್ತದೆ. ಬಡವರು/ಗ್ರಾಮೀಣ ಜನತೆ ಹಾಗೂ ವಿದ್ಯುತ್ ಪೂರೈಕೆಯಿಲ್ಲದಿರುವ ಊರಿನ ಜನರು ಇದನ್ನು ಕೊಂಡುಕೊಳ್ಳಲು ಆಗುವುದಿಲ್ಲ. ಈ ಸಮಸ್ಯೆಯ ಪರಿಹಾರಕ್ಕೆ ಉತ್ತರ ಕನ್ನಡ ಜಿಲ್ಲೆ, ಯಲ್ಲಾಪುರ ತಾಲ್ಲೂಕು ಆಚವೆ ಗ್ರಾಮದ ಬಿ. ವಿ. ಶ್ರೀಪ್ರಸಾದ್ ರವರು ವೈಜ್ಞಾನಿಕ ವಿಚಾರ ಹಾಗೂ ಕೌಶಲ್ಯ ಪೂರ್ಣತೆ ಯಿಂದ ಸುಲಭವಾಗಿ ದೊರೆಯುವ ವಸ್ತುಗಳನ್ನು ಬಳಸಿ ಕಡಿಮೆ ಬೆಲೆಯ ಸರಳ ರಚನೆಯ ಮತ್ತು ಕಾರ್ಯವಿಧಾನದ ''ದೇಶೀಯ ಶೀತಕ'' ಒಂದನ್ನು ಕಂಡುಹಿಡಿದಿರುತ್ತಾರೆ.




ಸಾಮಾನ್ಯವಾಗಿ ಎಲ್ಲಾ ಕಡೆ ದೊರೆಯುವ ಡಬ್ಬ, ಥರ್ಮೋಕೋಲ್ ಹಾಳೆ, ಪೈಪ್, ಬಾಟಲಿ ಮುಂತಾದವುಗಳನ್ನು ಮಾತ್ರ ಇಲ್ಲಿ ಬಳಸಲಾಗುತ್ತದೆ. ಈ ಶೀತಕದಲ್ಲಿ ಉಷ್ಣಾಂಶ 20^0 C ಇರುವುದರಿಂದ ಪಾನೀಯ, ಹಣ್ಣು ತರಕಾರಿ, ಹಾಲು, ಮೊಟ್ಟೆ ಮುಂತಾದವುಗಳನ್ನು ಸಂರಕ್ಷಿಸಬಹುದೆಂದು ಹೇಳುವ ಶ್ರೀಪ್ರಸಾದ್ ಈ ಶೋಧನೆಗಾಗಿ ಅನೇಕ ಸಂಘ ಸಂಸ್ಥೆಗಳಿಂದ ಪ್ರಶಸ್ತಿಗಳನ್ನೂ, ಕಿರಿಯ ವಿಜ್ಞಾನಿ ಪ್ರಶಸ್ತಿಯನ್ನೂ ತಮ್ಮ ವಿದ್ಯಾರ್ಥಿ ದಿಶೆಯಲ್ಲಿಯೇ ಪಡೆದಿರುತ್ತಾರೆ.

ಶೈತ್ಯ ದರೆಗೂಡು

3. ಮಲೆನಾಡಿನ ಮನೆಗಳಲ್ಲಿ ಮನೆಯ ಹಿಂದೆ ಅಥವಾ ಅಕ್ಕ ಪಕ್ಕದಲ್ಲಿ ಎಲ್ಲೋ ಮಣ್ಣುಗುಡ್ಡೆಯನ್ನು ಲಂಬವಾಗಿ ಕತ್ತರಿಸಿದಾಗ ಉಂಟಾಗುವ ಗೋಡೆಯಂತಹ ಸಮತಟ್ಟು ಜಾಗ (ದರೆ) ಇದ್ದೇ ಇರುತ್ತದೆ. ಕಾನಳ್ಳಿ (ಶಿರಸಿ ತಾಲ್ಲೂಕ್) ಸಮೀಪ ಮುಂಡ್ಗೆ ಜಡ್ಡಿ ಪ್ರಭಾಕರ್ ಹೆಗಡೆಯವರ ಮನೆಯ ಹಿಂದೆ ಅಂತಹದೊಂದು ದರೆ ಇದ್ದು, ಅದರ ಬುಡದಲ್ಲಿ ಅವರು ಒಂದು ಸ್ವಾಭಾವಿಕ ''ಶೈತ್ಯ ಗೂಡು'' ನಿರ್ಮಿಸಿರುವರು! ಒಂದಡಿ ಚೌಕಕಾರದ ಕಿಂಡಿ ಮಾಡಿ ಅದರ ಮೂಲಕ ಒಳಗಿನ ಮಣ್ಣನ್ನೆಲ್ಲ ಹೊರತೆಗೆದು ದರೆಯಲ್ಲಿ ಸಾಕಷ್ಟು ದೊಡ್ಡ ಗೂಡು ತಯಾರಿಸಿ ಈ ತಾಜಾ ಶೈತ್ಯ ಪೆಟ್ಟಿಗೆ ತಯಾರಿಸಲಾಗಿದೆ. ಯಾವುದೇ ತರಕಾರಿಯನ್ನು ಚೆನ್ನಾಗಿ ಸಂರಕ್ಷಿಸಲು ಇದು ಸೂಕ್ತ ಜಾಗ ಎಂದು ಪ್ರಭಾಕರ ಹೆಗಡೆಯವರ ಅನುಭವ.

ವೀಳ್ಯದೆಲೆ, ನಿಂಬೆಹಣ್ಣು ಅವುಗಳ ತಾಜಾತನ ಕೆಡದಿರಲು ಬಾವಿಯಲ್ಲಿ ತೂಗಿಬಿಡುವ ಪರಿಪಾಠ ಮೊದಲಿನಿಂದಲೂ ಈ ಭಾಗದಲ್ಲಿ ಇತ್ತು. ಅದಲ್ಲದೆ ನಡುಮನೆಯಲ್ಲಿ ಹೆಚ್ಚು ತಂಪು ಇರುತ್ತದೆ, ಇದನೆಲ್ಲ ಕಂಡಾಗ ಈ ಶೈತ್ಯ ದರೆಯ ಪ್ರಯೋಗ ಮಾಡುವ ಯೋಚನೆ ಹೆಗಡೆಯವರಿಗೆ ಮೂಡಿತಂತೆ.



ಪ್ರಭಾಕರ್ ಹೆಗಡೆಯವರ ಮನೆ ಬಳಿ ಇರುವುದು ಎರಡಾಳೆತ್ತರದ ಶೈತ್ಯ ದರೆ. ಅದರ ಬುಡದಲ್ಲಿ ಒಂದಡಿ ಎತ್ತರ, ಮೂರು ಅಡಿ ಅಗಲ, ಒಂದು ಅಡಿ ಉದ್ದದ ಗೂಡು ಇದೆ. ಗೂಡಿನೊಳಗೆ ಕತ್ತಲಾಗದಂತೆ ಅದಕ್ಕೊಂದು ಗಾಜು ತೊಡಿಸಿ ಬೆಳಕು ಒಳಗೆ ಬೀಳುವಂತೆ ಮಾಡಿಕೊಂಡಿದ್ದಾರೆ. ಬಾಗಿಲಿಗೆ ಮುಚ್ಚಲು ಒಂದು ಮರದ ಅಲಗ. ಹಗಲಿನಲ್ಲಿ ವಾತಾವರಣದ ಉಷ್ಣತೆ 32^0C ದಾಟಿದರೂ ಗೂಡಿನೊಳಗಿನ ಉಷ್ಣತೆ 10^0C ಮೀರುವುದಿಲ್ಲವಂತೆ! ವಿದ್ಯುತ್ ಖರ್ಚಿಲ್ಲ, ಆರೋಗ್ಯಕ್ಕೆ ಹಾನಿಯಾದೀತೆಂಬ ಹೆದರಿಕೆಯಿಲ್ಲ, ಆಧುನಿಕ ಫ್ರಿಜ್‌ಗಳು ಉಗುಳುವ ಸಿಎಫ್‌ಸಿ ವಿಷಾನಿಲ ಪರಿಸರ ಸೇರಿತೆಂಬ ಆತಂಕವಿಲ್ಲ, ಎಲ್ಲಕ್ಕೂ ಮಿಗಿಲಾಗಿ ಆರಂಭಿಕ ಖರ್ಚು ಮಾರುಕಟ್ಟೆಯಲ್ಲಿ ದೊರೆಯುವ ಫ್ರಿಜ್‌ಗೆ ಹೋಲಿಸಿದರೆ ಶೂನ್ಯ. ಈ 'ಶೈತ್ಯ ದರೆಗೂಡು' ಚಳಿಗಾಲದಲ್ಲಿಯೂ ಬಹಳ ಪ್ರಯೋಜನ ಕಾರಿಯೆಂತೆ. ಆ ಸಮಯದಲ್ಲಿ ವಾತಾವರಣದ ಆರ್ದ್ರತೆ ಕಡಿಮೆ ಇರುವುದರಿಂದ ತರಕಾರಿಗಳು ಬಹುಬೇಗ ಒಣಗುತ್ತವೆ. ಆದರೆ ಈ ಶೈತ್ಯ ದರೆಗೂಡಿನೊಳಗೆ ಇಟ್ಟರೆ ತೇವಾಂಶ ಉಳಿಸಿಕೊಂಡು ತಾಜಾ ಆಗಿಯೇ ಉಳಿಯುತ್ತವೆಯಂತೆ. ಒಂದು ಎಚ್ಚರಿಕೆ: ಇಲಿ, ಹೆಗ್ಗಣಗಳ ಕಾಟವಿದ್ದರೆ ಶೈತ್ಯ ದರೆಯ ತರಕಾರಿಗಳೆಲ್ಲ ದರೆಯಲ್ಲೇ ಮಾಯ!

(ವಿ. ಸೂ. ಈ ಎಲ್ಲಾ ಆನುಶೋಧನೆಗಳನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಐದನೇ ಸ್ಪರ್ಧೆಗೆ ಕಳುಹಿಸಿಕೊಡಲಾಗುವುದು.)

ಆಕಳುಗಳಿಗೆ ದ್ರಾಕ್ಷಿ ಎಲೆ !

ತಮಿಳುನಾಡಿನ ಥೇಣಿ ಜಿಲ್ಲೆಯ ವೆಲ್ಲಿಯಮ್ಮಪುರಮ್ ಗ್ರಾಮದ ಪೊನ್‌ರಾಜ್ ಒಬ್ಬ ಕೃಷಿ ಕಾರ್ಮಿಕ. ಇವರು ತಮ್ಮ ಹಸುಗಳಿಗೆ ಒಮ್ಮೆ ಸುತ್ತಮುತ್ತಲಿನ ಗ್ರಾಮದಲ್ಲಿ ಬೆಳೆದ ದ್ರಾಕ್ಷಿ ಎಲೆಗಳನ್ನು ತಿನ್ನಿಸಿದರು. ಪರಿಣಾಮವಾಗಿ, ಆಕಳುಗಳ ಹಾಲಿನ ಉತ್ಪಾದನೆ ಹೆಚ್ಚಾಗುವುದು ಅರಿವಾಯಿತು. ಅಂದಿನಿಂದ ಅವರು ತಮ್ಮ ಆಕಳು ಮತ್ತು ಮೇಕೆಗಳಿಗೆ ದ್ರಾಕ್ಷಿ ಎಲೆಗಳನ್ನು ತಿನ್ನಿಸುತ್ತಿದ್ದು ಇದರಿಂದ ಒಂದರಿಂದ ಎರಡು ಲೀಟರ್‌ವರೆಗೆ ಹಾಲಿನ ಉತ್ಪಾದನೆಯಲ್ಲಿ ಹೆಚ್ಚಾಗುವುದಾಗಿ ತಿಳಿಸಿದ್ದಾರೆ.

ಕೆಚ್ಚಲು ಬಾವಿಗೆ ಕಾಡು ಹಿರೇಎಲೆಯ ಔಷಧಿ

ದನಕರುಗಳಲ್ಲಿ ಕಂಡು ಬರುವ ಕೆಚ್ಚಲು ಬಾವು ಸಾಮಾನ್ಯವಾಗಿ ಬ್ಯಾಕ್ಟೀರಿಯಾಗಳಿಂದ ಉಂಟಾಗುತ್ತದೆ. ಕೆಲವೊಮ್ಮೆ ಶಿಲಿಂಧ್ರ ಮತ್ತು ಪಾಚಿಗಳಿಂದಲೂ ಬರುತ್ತದೆ. ಈ ಖಾಯಿಲೆಯಿಂದ ಕೆಚ್ಚಲು ಮತ್ತು ಮೊಲೆ ಊದಿಕೊಂಡು ಹಾಲಿನ ಉತ್ಪತ್ತಿ ಕಡಿಮೆಯಾಗುತ್ತದೆ. ರಕ್ತಮಿಶ್ರಿತ ಹಾಲು ಬರುವುದಲ್ಲದೆ, ಹಾಲು ಕರೆಯಲು ಬಹಳ ಕಷ್ಟಕರವಾಗುತ್ತದೆ. ಇದಕ್ಕೆ ತಮಿಳು ನಾಡಿನಒಂದು ಭಾಗದ ಜನರು ಕಾಡು ಹೀರೆಯ *(Var, Amara)* ಸೊಪ್ಪನ್ನು ಅರೆದು ಕೆಚ್ಚಲಿಗೆ ಹಚ್ಚುತ್ತಾರಂತೆ. ಜೊತೆಗೆ 10ಗ್ರಾಂ ಈಶ್ವರಿ ಬೇರನ್ನು ಅರೆದು 150ಮಿ.ಲಿ ನೀರಿನಲ್ಲಿ ಬೆರೆಸಿ ಕೆಚ್ಚಲಿಗೆ ಹಚ್ಚುವುದು ವಾಡಿಕೆ. ಇದು ತಮಿಳುನಾಡಿನ ರೈತರ ಅನುಭವವೂ ಆಗಿದೆ.

ಮೂಲ: ಹನಿಬೀ 11(4)&12(1)

ದನಕರುಗಳ ಗಾಯ / ಹುಣ್ಣುಗಳಿಗೆ

ದನಕರುಗಳಿಗೆ ಆಗುವ ಸಾಮಾನ್ಯ ಗಾಯಗಳಿಗೆ ಒರಿಸ್ಸಾ ರಾಜ್ಯದ ನೂಪಡ ಜಿಲ್ಲೆಯ ಮಜಲುಬಾತ ಗ್ರಾಮದ ಕಾಂಚನ ಸಿಂಗ್ ಮಜ್ಜಿ ಎಂಬ ಮಹಿಳೆ ಹಾವುಗಳ ಪೊರೆಯನ್ನು ಸಂಗ್ರಹಿಸಿ ಅವುಗಳಿಂದ ಲೇಪನವನ್ನು ತಯಾರಿಸಿ, ಗಾಯಗಳಿಗೆ ಹಚ್ಚಿ ವಾಸಿ ಮಾಡುತ್ತಾರಂತೆ.

ಇದೇ ರೀತಿ ಒರಿಸ್ಸಾ ರಾಜ್ಯದ ಅಂಗುಲ ಜಿಲ್ಲೆಯ ತೈನ್ಸಿ ಗ್ರಾಮದ ಅಂತರ್ಯಾಮಿ ಪ್ರಧಾನ್ ಎಂಬುವರು ದನಕರುಗಳ ಗಾಯಕ್ಕೆ ಕರಿಗೇರು ಮರದ *(Semecarpus anacardium)* ಬೀಜಗಳಿಂದ ಔಷಧಿ ತಯಾರಿಸಿ ಬಳಸುತ್ತಿದ್ದಾರೆ. ಕರಿಗೇರು ಮರದ ಎರಡು ಬೀಜಗಳನ್ನು 20–30 ಮಿ.ಲೀ. ಹರಳೆಣ್ಣೆಯಲ್ಲಿ ಬೇಯಿಸಿ ಅದರಿಂದ ಲೇಪವನ್ನು ತಯಾರಿಸಿ ದನಕರುಗಳ ದೇಹದ ಮೇಲೆ ಉಂಟಾಗಿರುವ ಯಾವುದೇ ರೀತಿಯ ಗಾಯಗಳಿಗೆ ಹಚ್ಚಿದರೆ ಗಾಯಗಳು ವಾಸಿಯಾಗುತ್ತವೆಯೆಂದು ಪ್ರಧಾನ್ ಹೇಳುತ್ತಾರೆ.

ಮೂಲ: ಹನಿ ಬೀ 14 (4) &15 (1)

ನಸುಗುನ್ನಿ-ಜಂತುಹುಳು ನಿಯಂತ್ರಣಕ್ಕೆ

ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಗೌಳಿ ಜನಾಂಗದವರು ಬಹಳ ಹಿಂದಿನಿಂದಲೂ ಜಾನುವಾರುಗಳಲ್ಲಿಯ ಜಂತುಹುಳು ನಿಯಂತ್ರಣಕ್ಕೆ ನಸುಗುನ್ನಿಕಾಯಿ *(Mucuna prurita)* ತಿನ್ನಿಸುತ್ತಿದ್ದರಂತೆ. ನಸುಗುನ್ನಿ ಬಳ್ಳಿಯಿಂದ ಜಾನುವಾರುಗಳಿಗೆ ಸತ್ವಯುತವಾದ ಮೇವು ದೊರೆಯುತ್ತದಂತೆ.

ಮೂಲ: ವಿಜಯ ಕರ್ನಾಟಕ 28–12–2005

ನಳಪಾಕ

ಅವರೆಯ ಹಿತಕು ಬೇಳೆ ಮೇಳ

ಬೆಂಗಳೂರು ಮಹಾನಗರದಲ್ಲಿ 'ಅವರೆಬೇಳೆ ಮೇಳ'ದ ಒಂದು ಸೊಗಡು. ಇಂತಹ ಮೇಳಗಳ ಮೂಲಕ ದೇಶೀಯ, ಸಾಂಪ್ರದಾಯಿಕ ತಿಂಡಿ – ತಿನಿಸುಗಳನ್ನು, ಬೆಂಗಳೂರಿನ ಸಜ್ಜನ್‌ರಾವ್ ಸರ್ಕಲ್‌ನಲ್ಲಿರುವ ಶ್ರೀ ವಾಸವಿ ಕಾಂಡಿಮೆಂಟ್‌ನ ಶಿವಕುಮಾರ್ ನಗರದ ಜನರಿಗೆ ಪರಿಚಯಿಸುತ್ತಿದ್ದಾರೆ.

ಸಂಕ್ರಾಂತಿ ಹಬ್ಬದ ಸಡಗರದೊಂದಿಗೆ ಈ ಮೇಳವು ಇದೇ ಜನವರಿ 12ರಿಂದ 22ರ ವರೆಗೆ ನಡೆದಿತ್ತು, ಈ ಮೇಳದ ಉದ್ಘಾಟನೆಯನ್ನು ಚಿತ್ರನಟಿ ತಾರಾ ಅವರು ಮಾಡಿದ್ದು, ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಶ್ರೀ ಚನ್ನಿಗಪ್ಪ, ಶ್ರೀ ಚಲುವರಾಯಸ್ವಾಮಿ, ಶ್ರೀ ಎಂ. ಅನಂತಕುಮಾರ್ ಇತ್ಯಾದಿ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಮಾಗಡಿ ತಾಲೂಕಿನ ರೈತರು ಬಾರಿ ಪ್ರಮಾಣದಲ್ಲಿ ಅವರೆ ಬೆಳೆಯುತ್ತಾರೆ. ಹಿತಕುವ ಮೊದಲು ಅವರೆ ಕಾಯಿ ಸುಲಿದಾಗ ಸಿಗುವ ಅದರ ಸಿಪ್ಪೆಯನ್ನು ಮೇವಿಗಾಗಿ ಬಳಸುತ್ತಾರೆ.ಇಲ್ಲಿನ 48 ಗ್ರಾಮಗಳ ರೈತರು ತಮ್ಮ ಹೊಲದ ತಾಜಾ ಹಿತಕು ಅವರೆ ಬೇಳೆಯೊಂದಿಗೆ ಈ ಮೇಳದಲ್ಲಿ ಪಾಲ್ಗೊಂಡಿದ್ದರು.

ಮೂರನೇ ವರ್ಷದ ಈ ಮೇಳಕ್ಕೆ ನಾಲ್ಕು ಸಾವಿರಕ್ಕೂ ಹೆಚ್ಚು ಜನ ಬಂದಿರುತ್ತಾರೆ. ಅವರೆ ಬೆಳೆಯ ವಿವಿಧ ಭಕ್ಷ್ಯಗಳಾದ ಸಾರು, ಚಟ್ನಿ, ಪಲ್ಯ, ರೊಟ್ಟಿ, ಹೋಳಿಗೆ, ಚಿಕ್ಕ ಮಸಾಲವಡೆ, ಪೂರಿ,ದೋಸೆ, ಪಾನಿಪೂರಿ, ಬೇಳೆಮಿಕ್ಸ್ , ಖಾರಬೇಳೆ, ಉಸಳಿ, ನಿಪ್ಪಟ್, ಪಾಯಸ, ಜಾಮೂನ್, ಸೊನಾಕೇಕ್, ಎಳ್ಳವರೆ, ಅವರೆಕಾಳು ಬೊಂಡಾ, ಸುಕ್ಕಿನುಂಡೆ, ಕಡಬು, ಕೋಫ್ತಾ, ಸಮೋಸ, ಸಿಹಿಪೊಂಗಲ್ ಇನ್ನೂ ಅನೇಕ ರೀತಿಯ ವಿವಿಧ ಭಕ್ಷ್ಯಗಳನ್ನು ಈ ಮೇಳದಲ್ಲಿ ಬೆಂಗಳೂರಿನ ಜನ ಸವಿಯುವ ಅವಕಾಶ ಸಿಕ್ಕಿತು.

ಪಾಶ್ಚಾತ್ಯ ತಿಂಡಿಗಳಿಗೆ ಜನ ಮಾರುಹೋಗುತ್ತಿರುವ ಸಂದರ್ಭದಲ್ಲಿ ನಾಟೀ ಸಂಸ್ಕೃತಿ ಗಟ್ಟಿ ಮಾಡುವ ಇಂತಹ ಅವರೆಬೇಳೆ ಮೇಳ ಶ್ಲಾಘನೀಯ. ಈ ಅವರೆ ಬೇಳೆಯನ್ನು ಎಣ್ಣೆಯಲ್ಲಿ ಹುರಿದರಂತೂ ವರ್ಷಗಟ್ಟಲೆ ಬಳಸಬಹುದು. ಇದಕ್ಕೆ ವಿದೇಶಗಳಲ್ಲಿ ಮಾರುಕಟ್ಟೆ ಇದೆಯಂತೆ!

ಈ ಬಾರಿ ಒಂದು ಲೀಟರ್‌ಗೆ 30 ರೂನಂತೆ 30 ಸಾವಿರ ಲೀಟರ್ ಅವರೆಯ ಹಿತಕು ಬೇಳೆ ಬಿಕರಿಯಾಗಿದೆ ಎಂದು ಶಿವಕುಮಾರ್ ಹೇಳುತ್ತಾರೆ.

ಜಾಗತೀಕರಣದ ಅಬ್ಬರದಲ್ಲಿ ಬಳಲುತ್ತಿರುವ ರೈತರನ್ನು ಉತ್ತೇಜಿಸಲು ಅವರೆ ಬೇಳೆಯ ವೈವಿಧ್ಯ ಭಕ್ಷ್ಯಗಳನ್ನು ಈ ರೀತಿ ಮತ್ತಷ್ಟು ಜನಪ್ರಿಯಗೊಳಿಸುವುದು ಶಿವಕುಮಾರ್‌ರವರ ಉದ್ದೇಶವಾಗಿದೆಯಂತೆ.

ಕಣ್ಣಿನ ಪೊರೆಯಿಂದ ದೂರವಿರಲು ಅರಿಶಿಣ ಮತ್ತು ಅರಿಶಿಣ ಸಾರ

ಕಣ್ಣಿನ ಪೊರೆ ವಯಸ್ಕರಲ್ಲಿ ಕಾಣುವ ಒಂದು ಸಾಮಾನ್ಯ ತೊಂದರೆ. ಸಕ್ಕರೆ ಖಾಯಿಲೆ, ಪೋಷಕಾಂಶಗಳ ಕೊರತೆ, ಬಿಸಿಲಿನಲ್ಲಿ ಹೆಚ್ಚಾಗಿ ತಿರುಗಾಡುವುದು, ವಂಶವಾಹಿನಿ, ಸ್ಟಿರಾಯ್ಡ್ ಬಳಕೆ ಮತ್ತು ಇನ್ನು ಮುಂತಾದವುಗಳು ಕಣ್ಣಿನ ಪೊರೆಗೆ ಹೆಚ್ಚಿನ ತೊಂದರೆಯನ್ನುಂಟು ಮಾಡುತ್ತವೆ ಎಂದು ತಿಳಿದು ಬಂದಿದೆ.

ಭಾರತೀಯ ಆಹಾರ ಸೇವನೆಯಲ್ಲಿ ಒಂದು ಪ್ರಮುಖ ಸಂಬಾರ ಪದಾರ್ಥವಾದ ಅರಿಶಿಣ ಸೇವನೆಯಿಂದ ಮನುಷ್ಯರಲ್ಲಿ ಕಣ್ಣಿನ ಪೊರೆ ಬರುವುದನ್ನು ನಿಯಂತ್ರಿಸಬಹುದೆಂದು ಎಂದು ಒಂದು ಅಧ್ಯಯನದಿಂದ ತಿಳಿದು ಬಂದಿದೆ.

ಹೈದರಾಬಾದ್ ಮೂಲದ ರಾಷ್ಟ್ರೀಯ ಪೋಷಕಾಂಶ ಸಂಸ್ಥೆ ಇಲಿಗಳ ಮೇಲೆ ಪ್ರಯೋಗ ನಡೆಸಿ ಅರಿಶಿಣ ಮತ್ತು ಅರಿಶಿಣಸಾರ ಇವೆರಡನ್ನು ಮಿತವಾಗಿ ಬಳಕೆ ಮಾಡುವುದರಿಂದ ಕಣ್ಣಿನ ಪೊರೆ ಬರುವುದನ್ನು ಮುಂದೂಡಬಹುದೆಂದು ತಿಳಿಸಿರುತ್ತದೆ. ಕೆಲ ವರ್ಷಗಳಿಂದ ಅಧ್ಯಯನ ನಡೆಸುತ್ತಿರುವ ಈ ಸಂಸ್ಥೆ ಅರಿಶಿಣ ಮತ್ತು ಅರಿಶಿಣಸಾರಗಳು ರೋಗ ಮತ್ತು ವೈರಸ್ ನಾಶಪಡಿಸುವ ಗುಣಗಳನ್ನು ಹೊಂದಿದೆ ಮತ್ತು ಇವುಗಳ ಸೇವನೆಯಿಂದ ಕ್ಯಾನ್ಸರ್‌ನಂತಹ ಭಯಾನಕ ಖಾಯಿಲೆಯನ್ನೂ ಗುಣಪಡಿಬಹುದಾಗಿದೆ ಎಂಬ ಅಂಶವನ್ನು ಬೆಳಕಿಗೆ ತಂದಿದೆ.

ರಾಷ್ಟ್ರೀಯ ಪೋಷಾಕಾಂಶ ಸಂಸ್ಥೆಯ ಸಂಶೋಧಕರಾದ ಡಾ. ಜಿ. ಭಾನು ಪ್ರಕಾಶರೆಡ್ಡಿ ಮತ್ತು ಡಾ. ಪಿ. ಸೂರ್ಯನಾರಾಯಣ್ ಇವರು ಇಲಿಗಳ ಮೇಲಿನ ಇತ್ತೀಚಿನ ಅಧ್ಯಯನದ ಪ್ರಕಾರ ಅರಿಶಿಣ ಮತ್ತು ಅರಿಶಿಣ ಸಾರ ಔಷಧಯುಕ್ತ ಆಹಾರವನ್ನು ಒದಗಿಸುತ್ತದೆ ಎಂದು ದೃಢಪಡಿಸಿದ್ದಾರೆ ಹಾಗೂ ದೀರ್ಘಕಾಲದ ಸಕ್ಕರೆ ಖಾಯಿಲೆಯನ್ನೂ ನಿಯಂತ್ರಿಸುತ್ತದೆ ಎನ್ನಲಾಗಿದೆ.

ಮೂಲ: The Hindu Business Line, 16.03.2006

ವೆಂಕಟರಮಣರ ಆಯುರ್ವೇದ ಮುಲಾಮುಗಳು

ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕು, ನಾವೂರು ಗ್ರಾಮದ ಎಸ್. ವೆಂಕಟರಮಣರು ತಲೆಶೂಲೆ, ಕಾಲುಒಡೆತ / ಅಡಿಕಡಿ ಹಾಗೂ ಸೌಂದರ್ಯ ವರ್ದನೆಗಾಗಿ ಆಯುರ್ವೇದ ಮುಲಾಮುಗಳನ್ನು ತಯಾರಿಸಿದ್ದಾರೆ. ಅವುಗಳ ವಿವರ ಈ ರೀತಿಯಿದೆ.

1. ತಲೆಶೂಲೆಗೆ ಮುಲಾಮು :

ಹಿಪ್ಪಲಿಹುಡಿ *(Piper longum)* 20ಗ್ರಾಂ, ಒಣಶುಂಠಿ 20ಗ್ರಾಂ, ಹಸಿಶುಂಠಿ ರಸ 30 ಮಿ.ಲೀ., ಇಜಿಸಿ ಸೊಪ್ಪಿನ ರಸ 100 ಮಿ.ಲೀ., ರಕ್ತಬಾಳ 5 ಗ್ರಾಂ. ಮುಂತಾದವುಗಳನ್ನು ಅರ್ಧ ಲೀ ತೆಂಗಿನೆಣ್ಣೆಯೊಂದಿಗೆ ಕಾಯಿಸಿ, ಶೋಧಿಸಿದ ನಂತರ ಜೇನುಮೇಣದೊಂದಿಗೆ ಮಿಶ್ರ ಮಾಡಿ ತಯಾರಿಸಿರುವ ಮುಲಾಮನ್ನು ತಲೆನೋವಿರುವವರು ಹಣೆಗೆ ಹಚ್ಚಿಕೊಂಡರೆ ಶೀಘ್ರವಾಗಿ ಶಮನವಾಗುವುದೆಂದು ವೆಂಕಟರಮಣರು ಹೇಳುತ್ತಾರೆ.

2. ಕಾಲು ಒಡೆತ/ಅಡಿತಡಿ :

ಹುಣಸೆ ಸೊಪ್ಪಿನ ರಸ 200 ಮಿ.ಲೀ., ಗರಿಕೆ ಹುಲ್ಲಿನ ರಸ 200 ಮಿ. ಲೀ. ಅರಿಶಿಣ ಪುಡಿ 5ಗ್ರಾಂ., ಪಚ್ಚೆಕರ್ಪೂರ 2ಗ್ರಾಂ. ಇವುಗಳನ್ನು ಅರ್ಧ ಲೀ ತೆಂಗಿನೆಣ್ಣೆಯೊಂದಿಗೆ ಬಾಣಲೆಯಲ್ಲಿ ಎಣ್ಣೆಯ ನೊರೆ ನಿಲ್ಲುವವರೆಗೂ ಕಾಯಿಸಿ, ಶೋಧಿಸಿ, ಜೇನು ಮೇಣದೊಂದಿಗೆ ಮಿಶ್ರಣ ಮಾಡಿರುವ ಈ ಮುಲಾಮುನ್ನು ಪಾದಗಳ ಒಡೆತಕ್ಕೆ ಹಚ್ಚುವುದರಿಂದ ಒಡೆದ ಪಾದಗಳನ್ನು ಸರಿ ಪಡಿಸಬಹುದಂತೆ.

3. 'ಶ್ರೀ ಕಾಂತಿ' ಸೌಂದರ್ಯವರ್ಧಕ :

ಒಂದು ಲೀಟರ್ ತೆಂಗಿನೆಣ್ಣೆ, ಕಾಲು ಲೀ. ತೆಂಗಿನಕಾಯಿಯ ಹಾಲು, ಆಗತಾನೇ ಕರೆದ ಹಸುವಿನ ಹಾಲು, ಅಶ್ವತ್ಥ ಎಲೆಯ ರಸ (ಅರ್ಧಲೀ), ಪುದಿನ ಎಲೆಯ ರಸ (ಕಾಲು ಲೀ.) ಮುಂತಾದ ವಸ್ತುಗಳ ಜೊತೆಗೆ ಮತ್ತೊಂದು ವಿಶಿಷ್ಟ ಮೂಲಿಕೆ (ಇಲ್ಲಿ ಅದನ್ನು ನಮೂದಿಸಿರುವುದಿಲ್ಲ ಇದು ಈ ಮುಲಾಮಿನ ತಯಾರಿಕೆಯಲ್ಲಿ ಪ್ರಮುಖ ಪಾತ್ರ ವಹಿಸುವಂತಹುದು) ಹಾಗೂ ಜೇನಿನ ಮೇಣವನ್ನು ಈ ಮುಲಾಮಿನ ತಯಾರಿಕೆಯಲ್ಲಿ ಬಳಸಿರುವುದಾಗಿಯೂ, ಇದನ್ನು ಉಪಯೋಗಿಸಿದರೆ ಮುಖದ ಕಾಂತಿಯು ಹೆಚ್ಚಾಗುವುದೆಂದು ವೆಂಕಟರಮಣರು ಹೇಳುತ್ತಾರೆ.

ಕ್ಯಾನ್ಸರ್ ತಡೆಯಲು

ಅರಿಶಿಣ, ಮೆಣಸು ಮತ್ತು ಶುಂಠಿ ಇವುಗಳ ಔಷಧೀಯ ಗುಣಗಳಿಂದ ಕ್ಯಾನ್ಸರ್ ನಂತಹ ಭಯಾನಕ ರೋಗವನ್ನು ತಡೆಗಟ್ಟಬಲ್ಲದು ಎಂದು ವರದಿಯಾಗಿದೆ. ಡಾ. ಸಂಜಯ್ ಶ್ರೀವಾತ್ಸವ ಎಂಬುವರು ಸ್ಕಾಟ್‌ಲ್ಯಾಂಡ್ ದೇಶದ ಪಿಟ್ಸ್‌ಬರ್ಗ್ ಔಷಧಿ ವಿಶ್ವವಿದ್ಯಾಲಯದಲ್ಲಿ ಅಧ್ಯಯನವನ್ನು ಕೈಗೊಂಡಿದ್ದರು. ಇಲಿಗಳ ಮೇಲೆ ಅಧ್ಯಯನ ನೆಡೆಸಿದ ಈ ವಿದ್ಯಾಲಯ ಕೆಂಪು ಮೆಣಸನ್ನು ಮಾನವನ ಮೇದೋಜೀರಕ ಗಡ್ಡೆಗಳೊಂದಿಗೂ ಪ್ರಯೋಗಿಸಿರುತ್ತದೆ. ಕ್ಯಾಪ್ಸ್‌ಸಿಕಮ್ ಎಂಬ ರಾಸಾಯನಿಕ ಅಂಶ ಮೆಣಸನ್ನು ಬಹಳ ಖಾರವಾಗಿಸುತ್ತದೆ. ಇದು ಸಹಜವಾದ ವಿಧಾನದಿಂದ ಬೇಡವಾದ ಕ್ಯಾನ್ಸರ್‌ಕೋಶಗಳು ಸಾಯುವ ಹಾಗೆ ಮಾಡಿ ಹೊರಹಾಕುವುದಾಗಿ ತಿಳಿದುಬಂದಿದೆ. ಹಾಗೆಯೇ ಆರೋಗ್ಯಕರವಾದ ಜೀವಕೋಶಗಳನ್ನು ಈ ರಾಸಾಯನಿಕ ಹಾಳುಮಾಡುವುದಿಲ್ಲ ಎಂದೂ ಡಾ. ಶ್ರೀವಾತ್ಸವ ಹೇಳುತ್ತಾರೆ. ಕ್ಯಾಪ್ಸ್‌ಸಿಕಮ್ ಕ್ಯಾನ್ಸರ್ ಕೋಶಗಳನ್ನು ಸಾಯುವಂತೆ ಮಾಡುತ್ತಾಗಣನೀಯ ವಾಗಿ ಕ್ಯಾನ್ಸರ್ ಗೆಡ್ಡೆಯ ಗಾತ್ರವನ್ನೂ ಕಡಿಮೆಗೊಳಿಸಬಲ್ಲದಂತೆ.

ಅಮೇರಿಕಾ ದೇಶದ ಮಿಚಿಗನ್ ವಿಶ್ವವಿದ್ಯಾಲಯದಲ್ಲಿ ಡಾ. ರೆಬೆಕ್ಕಾ ಲಿಯು ಎಂಬುವರು ಇದೇ ರೀತಿ ಶುಂಠಿಯ ಮೇಲಿನ ಅಧ್ಯಯನವನ್ನು ಪೂರ್ಣಗೊಳಿಸಿದ್ದಾರೆ. ಅವರ ಲೇಖನದ ವರದಿಯ ಪ್ರಕಾರ ಕರಗಿದ ಶುಂಠಿಯ ಪುಡಿಯನ್ನು ಗರ್ಭಕೋಶದ ಕ್ಯಾನ್ಸರ್ ಜೀವಕೋಶಗಳಿಗೆ ಪ್ರಯೋಗಿಸಿದಾಗ, ಪರಿಣಾಮ ಪ್ಲಾಟಿನಂ ಅನ್ನು ಮೂಲವಾಗಿ ಹೊಂದಿರುವ ರಾಸಾಯನಿಕ ಔಷದಿಗಳು ಕ್ಯಾನ್ಸರ್ ಜೀವಕೋಶಗಳನ್ನು ಕೊಲ್ಲುವ ಶಕ್ತಿಗೆ ಸಮನಾಗಿ ಅಥವಾ ಅದಕ್ಕಿಂತ ಉತ್ತಮವಾಗಿರುವುದಾಗಿ ತಿಳಿದು ಬಂದಿರುತ್ತದೆ.

ಈ ಎರಡು ಅಧ್ಯಯನಗಳು ವಾಶಿಂಗ್‌ಟನ್‌ನಲ್ಲಿ ಅಮೇರಿಕನ್ ಅಸೋಸಿಯೇಟ್ಸ್ ಕ್ಯಾನ್ಸರ್ ಸಂಶೋಧನೆಯ ವಾರ್ಷಿಕ ಸಭೆಯಲ್ಲಿ ಲೇಖನ ರೂಪದಲ್ಲಿ ಪ್ರಕಟಿಸಲಾಯಿತು.

''ತೆರೆದ ಬಾವಿ ಮರುಪೂರಣ ಕಾಕೋಳದ ಯಶೋಗಾಥೆ''

ಶ್ರೀ ಚನ್ನಬಸಪ್ಪ ಶಿವಪ್ಪ ಕೊಂಬಳಿಯವರು ರಾಣಿಬೆನ್ನೂರು ತಾಲೂಕು ಕಾಕೋಳ ಗ್ರಾಮದಲ್ಲಿ '' ನೈಸರ್ಗಿಕ ಸಂಪನ್ಮೂಲ ಅಭಿವೃದ್ಧಿ ಸಂಘ'' ಒಂದನ್ನು ಕಟ್ಟಿದ್ದು ಅಂತರ್ಜಲ ಮರುಪೂರಣದ ಮತ್ತು ಅಭಿವೃದ್ಧಿಯಲ್ಲಿ ಅಚ್ಚರಿಯ ಸಾಧನೆಗೈದಿರುವರು. ಹಾಗಾಗಿ ಇವರನ್ನು ಬಯಲು ಸೀಮೆಯ ಭಗೀರಥ ಎಂದು ಕರೆಯಲಾಗಿದೆ.

ಇವರು ಎಂಟ್ಟತ್ತು ಜಿಲ್ಲೆಗಳಲ್ಲಿ ಅಲ್ಲಲ್ಲಿ ಉಪನ್ಯಾಸಗಳ ಮೂಲಕ ಮಳೆ ನೀರಿನ ಬಗ್ಗೆ ಎಚ್ಚರ ಮೂಡಿಸಿದ್ದು, ಆರು ಸಾವಿರಕ್ಕೂ ಹೆಚ್ಚು ಜನರಿಗೆ ಹಸಿರು ಕಂಕಣ ತೊಡಿಸಿದ್ದಾರೆ. ರೈತ ಸಮೂಹಕ್ಕೆ ಸ್ಫೂರ್ತಿ ಮತ್ತು ಚೈತನ್ಯಗಳನ್ನು ನೀಡಿದ್ದಾರೆ. ಕೊಂಬಳಿಯವರ ಈ ಕೆಲಸಗಳನ್ನು ಗುರುತಿಸಿದ ಹತ್ತಕ್ಕೂ ಹೆಚ್ಚು ಸಂಸ್ಥೆಗಳು ಅವರನ್ನು ಸನ್ಮಾನಿಸಿರುತ್ತವೆ.

ಶ್ರೀ ಕೊಂಬಳಿಯವರ ಸಾಧನೆಗಳಾದ ಅಂತರ್ಜಲ ಅಭಿವೃದ್ಧಿ, ಮಳೆನೀರು ಕೊಯ್ಲು, ಕೃಷಿಕ ಪರ ಚಟುವಟಿಕೆ, ಶಾಲಾ ಮಕ್ಕಳಲ್ಲಿ ಹಸಿರು ಪ್ರೀತಿ, ನೀರಿಗೆ ಸಂಬಂಧಿಸಿದ ಅನೇಕ ಉಪಮೆ, ಗಾದೆ ಮಾತುಗಳು, ರೈತರ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಪಟ್ಟ ಸಮಗ್ರ ಮಾಹಿತಿಯನ್ನೊಳಗೊಂಡ ಪುಸ್ತಕ. '' ತೆರೆದ ಬಾವಿ ಮರು ಪೂರಣ ಕಾಕೋಳದ ಯಶೋಗಾಥೆ'' ಕೃತಿಯನ್ನು ಧಾರವಾಡ ಪರ್ಯಾಯ ಕೃಷಿ ಮಾಧ್ಯಮ ಕೇಂದ್ರ ಪ್ರಕಟಿಸಿರುತ್ತದೆ.

ಪ್ರಕಾಶಕರು: ಪರ್ಯಾಯ ಕೃಷಿ ಮಾಧ್ಯಮ ಕೇಂದ್ರ, ಕೃಷ್ಣಾಲಯ,1ನೇಮುಖ್ಯರಸ್ತೆ, 4ನೇ ಅಡ್ಡರಸ್ತೆ, ನಾರಾಯಣಪುರ, ಧಾರವಾಡ – 580008

ಸಾವಯವ ಪರಂಪರೆಯ ಕಥನ - ಕೈಪಿಡಿ

(ಸಾವಯವ ಕೃಷಿ ಅನುಶೋಧಕರು ನೆಡೆದು ಬಂದ ದಾರಿ – ಭಾಗ1)

ಕರ್ನಾಟಕದ ಬೆಂಗಳೂರು ಮೂಲದ ಇಕ್ರಾ *(Institute for Cultural Research and Action)* ಸಂಸ್ಥೆ ಹಲವು ವರ್ಷಗಳಿಂದ ಸಾವಯವ ಕೃಷಿಯಲ್ಲಿ ತೊಡಗಿಸಿಕೊಂಡಿದ್ದು ರೈತರಿಗಾಗಿ 'ಸಾವಯವ ಪರಂಪರೆಯ ಕಥನ' ಎಂಬ ಈ ಕೈಪಿಡಿಯನ್ನು ಹೊರತಂದಿದ್ದಾರೆ.

ಕೆ. ಎಂ. ಕುಂಬಳ್ ಮತ್ತು ಸಹಪಾಠಿಗಳು ಈ ಪುಸ್ತಕವನ್ನು ರಚಿಸಿದ್ದು ಓದುಗರಿಗೆ ಸರಳವಾಗಿ ಅರ್ಥವಾಗುವಂತೆ ಈ ಕೈಪಿಡಿ ಮೂಡಿಬಂದಿದೆ. ಪ್ರಯೋಗ ಶೀಲರಾದ ಕೆಲವು ಅನುಶೋಧಕರು ನೆಡೆದು ಬಂದದಾರಿಯಲ್ಲಿ ಕಂಡ ಸೋಲು–ಗೆಲವುಗಳು, ನೋವು–ನಲಿವುಗಳ ಆಗರವೇ ಈ ಪುಸ್ತಕವಾಗಿರುತ್ತದೆ. ಒಂದು ರೀತಿಯಲ್ಲಿ ಇಲ್ಲಿ ಮೂಡಿ ಬಂದಿರುವುದೆಲ್ಲಾ ರೈತರ ಬೌದ್ಧಿಕ ಜೀವನ ಚರಿತ್ರೆಯೇ ಆಗಿದ್ದು, ತೆರೆಮರೆಯಲ್ಲೇ ವಾಸವಾಗಿದ್ದ ಇಂಥ ಸ್ವಗತಗಳು ಯಾವುದೇ ಮಹಾನ್ ವ್ಯಕ್ತಿಗಳ ಜೀವಾನುಭವವನ್ನು ಸರಿಗಟ್ಟಬಲ್ಲದ್ದಾಗಿದೆ.

ಈ ಕೃತಿಯಿಂದ ಸಾವಯವ ಕೃಷಿ ಅನುಶೋಧಕರು ನಡೆದು ಬಂದದಾರಿಯ ಪ್ರಾರಂಭವಾಗಿದೆ. ಈ ಸರಣಿಯಲ್ಲಿನ ಮೊದಲ ಕೃತಿ ಸಾವಯವ ಸಾಗರದ ಅನುಶೋಧನೆಯಾಗಿದೆ.

ಈ ಪುಸ್ತಕದ ಪರಿವಿಡಿಯಲ್ಲಿ ''ಬರದಲ್ಲಿ ಬಸವಳಿದೂ ಬೇಸಾಯ ನೆಚ್ಚಲು ಸಾವಯವವೇ ಪ್ರೇರಣೆ, ಸೂರ್ಯ ಉದಯಕ್ಕೆ ಮುಂಚೆ ಯೇರು ಕಟ್ಟೋನೆ, ರೈತ ಅಂತರಂಗ ಶುದ್ಧಿಯಿಲ್ಲದೆ ಸಾವಯವ ಕಾಣ್ಕೆ ದಕ್ಕದು. ಸಾವಯವ ಬೇಸಾಯದಲ್ಲಿ ರೈತರೇ ನಮ್ಮ ಗುರುಗಳು. ಪ್ರಕೃತಿಯ ಲಯಕ್ಕೆ ಲಯವಾಗಿರುವುದೇ ಸಾವಯವ ಕೃಷಿ.'' ಎಂದಿರುವುದು ಅರ್ಥಪೂರ್ಣವಾಗಿದೆ.

ಪ್ರಕಾಶಕರು: *Institute for Cultural Research and Action (ICRA) Sanskrit, #22, P.B. 7551, Michael Palya, New Thippasandra Post, Bangalore - 75* *ಬೆಲೆ : 60/– ಪುಟ. 114*

ಅಡಿಕೆ ವೈದ್ಯ

ಅಡಿಕೆ ನಮ್ಮ ರಾಜ್ಯದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ದೊಡ್ಡಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ಭಾರತದಲ್ಲಿ ಅನುಕ್ರಮವಾಗಿ ಕರ್ನಾಟಕ, ಕೇರಳ, ಅಸ್ಸಾಂ, ಮಹಾರಾಷ್ಟ್ರ, ಗೋವಾ ರಾಜ್ಯಗಳಲ್ಲಿ ಇದನ್ನು ಬೆಳೆಯಲಾಗುತ್ತದೆ. ವೈದ್ಯಕೀಯದಲ್ಲಿ ಅಡಿಕೆ ಅನೇಕ ಪ್ರಕಾರಗಳಲ್ಲಿ ಉಪಯೋಗಿಸಲಾಗುತ್ತಿದೆ. ನಾಟೀ ಪದ್ದತಿಯಂತೆ ಅಡಿಕೆ ಸಸ್ಯದ ಅಂಗಗಳಾದ ಅಡಿಕೆ ಫಲ, ಬೇರು, ಕಾಂಡ, ಹಂಬಾಳೆ, ಹಾಳೆ, ಸೋಗೆ, ಸಿಪ್ಪೆ, ಚೊಗರುಗಳೆಲ್ಲ ಔಷಧೀಯ ವಸ್ತುಗಳಾಗಿವೆ. ಅಡಿಕೆ ಸಸ್ಯದ ಎಲ್ಲಾ ಅಂಗಗಳು ಔಷಧಿಯ ಗುಣ ಹೊಂದಿದೆ.

ಡಾ|| ಗೋದ್ಲು ಬೀಳರ ಈ ಎಲ್ಲಾ ವಿಚಾರಗಳ ಮೇಲೆ ಬೆಳಕು ಚೆಲ್ಲುವ ಪುಸ್ತಕ ಅಡಿಕೆ ವೈದ್ಯ.ಈ ಪುಸ್ತಕದ ಒಳಪುಟಗಳಲ್ಲಿ ವಿಜ್ಞಾನದಲ್ಲಿ ಅಡಿಕೆ, ಅಡಿಕೆ ಮಾತಾನಾಡಿದಾಗ ವೈದ್ಯ, ವಿಜ್ಞಾನದಲ್ಲಿ ಅಡಿಕೆ ಮಾಡಿನೋಡಿ. ಸಮಸ್ಯೆ ಮತ್ತು ಪರಿಹಾರ. ಹಲವು ಸಂಶೋಧನೆ ಮತ್ತು ಅಡಿಕೆ ಬದಲಿ ಬಳಕೆಯ ವಿಷಯಗಳನ್ನು ಒಳಗೊಂಡಿರುತ್ತದೆ.

ಅಡಿಕೆ ಬದಲಿ ಬಳಕೆಯಿಂದ ಮೂಲವಸ್ತುಗಳನ್ನು ಸಂಸ್ಕರಿಸಿ, ಪೂಗ ಪಾಕದ ರುಚಿಗೆ ಸೂಕ್ತ ಸಂಯುಕ್ತ ವಸ್ತು ಬೆರೆಸಿ, ಜಾಮ್, ಐಸ್‌ಕ್ರೀಂಗಳನ್ನಾಗಿ ಪರಿವರ್ತಿಸಬಹುದಾಗಿದೆ. ಅಡಿಕೆಯಿಂದ ಬೇರ್ಪಡಿಸಿದ ಚೊಗರನ್ನು ಫೆರೆಸ್ ಸಲ್ಫೇಟ್‌ಗೆ ಮಿಶ್ರಗೊಳಿಸಿ ರಿಫೀಲ್‌ಗಳಿಗೆ ಶಾಯಿ ತಯಾರಿಸಬಹುದಾಗಿದೆ. ಅಡಿಕೆಯಲ್ಲಿರುವ ಪೂಗ ಪಾಕದಿಂದ ಸಿಹಿ ತಿಂಡಿಗಳನ್ನು, ಬಿಸ್ಕಟ್ ಚೂಯಿಂಗ್ ಗಮ್ ಇತ್ಯಾದಿ ವಸ್ತುಗಳನ್ನು ಸಂಶೋಧಿಸಿ ತಯಾರಿಸಬಹುದಾಗಿದೆ. ಅಡಿಕೆಯ ಉಪ ಉತ್ಪನ್ನಗಳಾದ ಸಿಪ್ಪೆ, ಹಾಳೆ, ಮರಮುಟ್ಟು ಹಾಗೂ ಇನ್ನತರ ವಸ್ತುಗಳಿಂದ ಇತರ ಪರ್ಯಾಯ ಉಪಯೋಗ ಪಡೆಯಬಹುದಾಗಿದೆ.

ಲೇಖಕರು : ಡಾ|| ಜಿ. ಎನ್. ಹೆಗಡೆ ಗೋದ್ಲಬೀಳು ಪ್ರಕಾಶಕರು : ಹರೀಶ್ ಎಂಟರ್ ಪ್ರೈಸಸ್ ನಂ. 7/3, ಮೊದಲನೇ ಮಹಡಿ ಡಯಾಗ್ನಲ್ ರಸ್ತೆ ಜನತಾ ಹೊಟೆಲ್ ಎದುರು, ವಿ. ವಿ. ಪುರಂ, ಬೆಂಗಳೂರು – 560004 ಬೆಲೆ: ರೂ.70 / – ಪುಟ– 121.

ಬೇರುಹುಳುಗಳ ನಿಯಂತ್ರಣಕ್ಕೆ ಜೊಂಡಿನ ಬಳಕೆ



ಉತ್ತರ ಕನ್ನಡ ಜಿಲ್ಲೆಯ ಶಿರಸಿ ಪಕ್ಕ ಬೆಂಗಾಳಿ ಗ್ರಾಮದ ಶ್ರೀ ವೆಂಕಟೇಶ್, ಕೆರೆಕಟ್ಟೆಯಲ್ಲಿ ಬೆಳೆಯುವ ಜೊಂಡನ್ನು ತೆಂಗು, ಅಡಿಕೆ ತೋಟಕ್ಕೆ ಮುಚ್ಚಿಗೆ ಮಾಡಿ ಬೇರುಹುಳು ನಿವಾರಣೆ ಮಾಡುವುದನ್ನು ಕಂಡುಕೊಂಡಿದ್ದಾರೆ. ಜೊಂಡನ್ನು ಮುಚ್ಚಿಗೆ ಮಾಡಿದ ನಾಲ್ಕೈದು ತಿಂಗಳ ನಂತರ ವೆಂಕಟೇಶ್ ಪದರ ಸರಿಸಿ ನೋಡಿದಾಗ, ಸಾವಿರಾರು ಬೇರು ಹುಳುಗಳು ಭೂಮಿಯ ಒಳಭಾಗದಿಂದ ಜೊಂಡಿನ ಪದರಕ್ಕೆ ಅಂಟಿಕೊಂಡಿದ್ದು, ನಂತರ ಆಳುಗಳನ್ನು ಬಳಸಿ ಹುಳುಗಳನ್ನು ಹೆಕ್ಕಿಸಿ ನಾಶಪಡಿಸಿರುತ್ತಾರೆ, ಈ ಕೆರೆ ಜೊಂಡನ್ನು ಹೊಲದಲ್ಲಿ ಹರಡಿದಲ್ಲಿ ಉಪಯೋಗ ಹತ್ತಾರು. ಒಮ್ಮೆ ಮಳೆ ಬಂದಾಗ ನಾಲ್ಕೈದು ತಿಂಗಳು ನೀರು ಹಾಯಿಸುವ ಅಗತ್ಯವಿಲ್ಲ. ಇದರಿಂದ ತೋಟದಲ್ಲಿ ತೇವಾಂಶ ಹೆಚ್ಚಾಗುತ್ತದೆ, ಅಷ್ಟೆ ಅಲ್ಲ, ಈ ತೇವಾಂಶ ವರ್ಷವಿಡೀ ಇರುತ್ತದೆ. ಜೊಂಡು ಒಂದಿಂಚಿಗಿಂತ ದಪ್ಪ ಇದ್ದರೆ ಯಾವುದೆ ಕಳೆ ಬೆಳೆಯುವುದಿಲ್ಲ, ಎರೆಹುಳುಗಳು ಹೆಚ್ಚಾಗುತ್ತವೆ. ಇದರಿಂದ ಸಾವಯವ ಗೊಬ್ಬರ ಅಧಿಕವಾಗಿ ತೋಟಕ್ಕೆ ಯಾವ ರೋಗ ಭಾದೆ ಇಲ್ಲದೆ ನಳನಳಿಸುತ್ತದೆ ಎನ್ನುತ್ತಾರೆ ವೆಂಕಟೇಶ್.

ಕೆರೆಕಟ್ಟೆಯಲ್ಲಿ ಜೊಂಡು ತೆಗೆಯುವುದರಿಂದ ಜನ ಜಾನುವಾರುಗಳಿಗೆ ನಿರ್ಮಲ ನೀರು ಸಿಗುತ್ತದೆ. ಪರಿಸರವೂ ಸ್ವಚ್ಛವಾಗಿರುತ್ತದೆ ಎನ್ನುವುದರಲ್ಲಿ ಅನುಮಾನವಿರದು.

ಅಡಿಕೆ ಕೊಳೆರೋಗ ನಿಯಂತ್ರಣ

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಇಡಗುಂಜಿಯ ಕೆ.ಜಿ.ಬೋಡೆಯವರು ಅಡಿಕೆ ಕೊಳೆ ರೋಗ ನಿವಾರಣೆಗೆ ತಮ್ಮದೇ ಆದ ಪರಿಹಾರ ಕಂಡುಕೊಂಡಿದ್ದಾರೆ. ಒಂದು ಲೀಟರ್ ನೀರಿನಲ್ಲಿ 10 ಗ್ರಾಂ ನಂತೆ ಕೆಸುವಿನ (*Colocasia antiqorum*) ಎಲೆ ಅಥವಾ ಗಡ್ಡೆಯನ್ನು ಕುದಿಸಿ, ಸೋಸಿ, ಕೊಳೆ ರೋಗ ಭಾದಿತ ಅಡಿಕೆ ಮರಗಳಿಗೆ ಸಿಂಪಡಿಸಿದರೆ, ಕೊಳೆ ರೋಗ ನಿಯಂತ್ರಣ ವಾಗುತ್ತದೆ ಎನ್ನುತ್ತಾರೆ ಬೋಡೆಯವರು.

ಕಾಳು ಮೆಣಸು ಕೊಳೆರೋಗಕ್ಕೆ ಮಾನವ ಮೂತ್ರ

ಕಾಳು ಮೆಣಸಿನ ಬಳ್ಳಿಗೆ ಸೊರಗು ರೋಗ ಬಂದಾಗ ಎಲೆ ಹಣ್ಣಾಗಿ ಉದುರಿ ಬಳ್ಳಿಸಂದು ತುಂಡಾಗಿ ಬಿದ್ದು ಸ್ವಲ್ಪ ದಿನದಲ್ಲಿ ಇಡೀ ಬಳ್ಳಿಯೇ ನಾಶವಾಗುವುದು. ಅಲ್ಲದೇ ಬಳ್ಳಿ ಚಿಗುರಿ ಗೊಂಚಲು ಬೆಳೆದಂತೆ ಕಾಳು ಉದುರಲು ತೊಡಗಿ ಹಣ್ಣಾಗುವವರೆಗೂ ಉದುರುವುದು. ಇದಕ್ಕೆ ಪರಿಹಾರವಾಗಿ ಕಾಸರಗೋಡಿನ ಶ್ರೀ ಸುಬ್ರಾಯನಾಯಕ್‌ರ ಕ್ರಮ ಈ ಕೆಳಗೆ ಕೊಡಲಾಗಿದೆ. ಒಂದು ಲೀಟರ್ ಮನುಷ್ಯಮೂತ್ರಕ್ಕೆ ಎಂಟು ಲೀಟರ್ ನೀರು ಸೇರಿಸಿ ಬಳ್ಳಿಯ ಬುಡಕ್ಕೆ ಒಂದೊಂದು ಲೀಟರ್‌ನಂತೆ ಎರೆಯುತ್ತಾರಂತೆ. ಮೊದಲು ಎರಡು ಮೂರು ದಿನ ರೋಗ ಬಾಧಿತ ಬಳ್ಳಿಗಳಿಗೆ ಈ ರೀತಿ ಮಾಡಿ ಮುಂದೆ ತೋಟದ ಒಂದು ಬದಿಯಿಂದ ಎರೆಯುತ್ತಾ ಮುಂದುವರೆಸಿ ವರ್ಷದಲ್ಲಿ ಮೂರು ನಾಲ್ಕು ಸಲ ಆವರ್ತಿಸಿದರೆ ಕಾಳು ಮೆಣಸಿನ ಬಳ್ಳಿಯ ರೋಗ ಕಡಿಮೆಯಾಗಿ ಬಳ್ಳಿ ಸಾಯುವುದು ನಿಲುತ್ತದೆಯಂತೆ. ಮುಂದೆ ಮಳೆ ಬಂದ ಕೂಡಲೇ ಒಂದು ಬಳ್ಳಿಗೆ ಅರ್ಧ ಕಿಲೊ ಕಹಿ ಬೇವಿನಸೊಪ್ಪನ್ನು ಹರಡಿ, ಕಾಲು ಕಿಲೊ ಎರೆಹುಳು ಗೊಬ್ಬರವನ್ನು ಮೇಲು ಗೊಬ್ಬರವಾಗಿ ಕೊಡಬಹುದು. ಬಳ್ಳಿಯು ಮೊದಲಿನಂತೆ ಆರೋಗ್ಯವಾಗಿ ಚಿಗುರುತ್ತದೆಯೆಂದು ನಾಯಕ್ ಹೇಳುತ್ತಾರೆ

ಮೂಲ: ಅಡಿಕೆ ಪತ್ರಿಕೆ, ಜೂನ್ 2005 , ಪುಟ – 31

ಕೀಟನಾಶಕವಾಗಿ ಸುಡು ಮಣ್ಣಿನ ಬಳಕೆ

ದಕ್ಷಿಣ ಕನ್ನಡ ಜಿಲ್ಲೆಯ ರೈತರು ತಯಾರಿಸುವ ವಿಶೇಷ ಗೊಬ್ಬರ ಹಾಗೂ ಜೈವಿಕ ಕೀಟ ಹತೋಟಿಯ ಕ್ರಮ. ಹೊಲದಂಚಿನಲ್ಲಿ ಬೆಳೆದ ಮುಳ್ಳು, ಕೊಳೆಯದ ದಪ್ಪ ರೆಂಬೆಗಳು ಇತ್ಯಾದಿಗಳನ್ನು ಒಂದೆಡೆ ರಾಶಿಹಾಕಿ, ಮಣ್ಣಿನೊಡನೆ ಸುಡುವುದು, ಸುಟ್ಟ ಮಣ್ಣನ್ನು ತರಕಾರಿ ಬೆಳೆಗಳಿಗೆ ಹಾಕಿದರೆ ಉತ್ತಮ ಇಳುವರಿ ತೆಗೆಯಬಹುದು. ಈ ಪೊಟಾಷ್‌ಯುಕ್ತ ಮಣ್ಣು ಕೀಟನಾಶಕವಾಗಿ ಪರಿವರ್ತಿತವಾಗುತ್ತದೆ. ರಸ ಹೀರುವ ಪೀಡೆಗಳು ನಾಶವಾಗುತ್ತವೆಯಂತೆ.

ಬದನೆಕಾಯಿಯ ಬೂದಿಹುಳು ನಿಯಂತ್ರಣ

ತಮಿಳು ನಾಡು ರಾಜ್ಯದ, ವಿರುದ್‌ನಗರ್ ಜಿಲ್ಲೆಯ ಸುಂದರರಾಜ ಪುರಮ್ ಗ್ರಾಮದ ರೈತರು ಬದನೆಕಾಯಿಯಲ್ಲಿ ಕಂಡುಬರುವ ಬೂದಿಹುಳಕ್ಕೆ ಒಂದು ಉಪಾಯವನ್ನು ಕಂಡು ಕೊಂಡಿದ್ದಾರೆ. ಎರಡು ತಿಂಗಳ ಬದನೆಕಾಯಿ ಬೆಳೆಯಲ್ಲಿ ಬೂದಿಹುಳುಗಳ ಆಕ್ರಮಣಕ್ಕೆ ಬಹಳ ಅನುಕೂಲವಾಗಿರುತ್ತದೆ. ಅತಿಚಿಕ್ಕ ಹುಳುಮರಿಗಳು (ಗ್ರಬ್ಸ) ಹಸಿರಾದ ಪೌದೆಯನ್ನು ಹಾಳುಮಾಡಿ ಎಲೆಯ ದ್ಯುತಿಸಂಶ್ಲೇಷಣೆ ಭಾಗವನ್ನು ಕಡಿಮೆ ಗೊಳಿಸುತ್ತವೆ. ಇದಕ್ಕೆ ಸುಂದರ ರಾಜಪುರಮ್ ಗ್ರಾಮದ ರೈತರು ಅವರೆಮ್ (*Casspa auriculatum*) ಎಂಬ ಸಸ್ಯದ ಎಲೆಗಳನ್ನು ಮಣ್ಣಿನ ಮಡಕೆಯಲ್ಲಿ ಹಾಕಿ ಸುಟ್ಟು ಬೆಂಕಿಯ ಜ್ವಾಲೆ ಬದನೆಕಾಯಿ ಗಿಡಗಳಿಗೆ ತಲುಪುವಂತೆ ಮಾಡುತ್ತಾರೆ. ಇದರಿಂದ ಬೂದಿ ಹುಳದ ನಷ್ಟ ಕಡಿಮೆಯಾಗುತ್ತದೆ ಎಂದು ತಿಳಿಸಿದ್ದಾರೆ.



ಮೂಲ: ಹನಿಬೀ Vol 16(4) Oct-Dec 2005 ಪುಟ.14

ಕೀಟ ಹತೋಟಿ ಹಬ್ಬಗಳು

ಉತ್ತರ ಕರ್ನಾಟಕದ ಹಳ್ಳಿಗಾಡು ಪ್ರದೇಶದಲ್ಲಿಕೃಷಿ ಆಧಾರಿತ ಧಾರ್ಮಿಕ ಆಚರಣೆ ಹಬ್ಬಹರಿ ದಿನಗಳು ಇಂದಿಗೂ ಇವೆ. ರೈತರು ಮುಂಗಾರು ಬಿತ್ತನೆಯನ್ನು ಜೂನ್ ತಿಂಗಳಲ್ಲಿ ಆರಂಭಿಸುತ್ತಾರೆ. ಬಿತ್ತನೆ ಮಾಡಿದ ಎರಡು ತಿಂಗಳಲ್ಲಿ ಅಮವಾಸ್ಯೆಯೆಂದು ಕೆರ್ಯಾಂಬಲಿ ಹಬ್ಬ ಆಚರಿಸುತ್ತಾರೆ. ಈ ಹಬ್ಬದಲ್ಲಿ ಎಳ್ಳು ಮತ್ತು ಶೇಂಗಾಉಂಡೆ, ಗೋಧಿಹಿಟ್ಟಿನ ಉಂಡೆ, ಅರಳಿಟ್ಟು, ತಂಬಿಟ್ಟು, ಕರಿಗಡುಬು, ವಡೆ, ಮೊದಲಾದ ಆಹಾರ ಪದಾರ್ಥಗಳನ್ನು ಹಾಗೂ ಮಣ್ಣಿನಿಂದ ತಯಾರಿಸಿದ ಚಿಕ್ಕ ಎತ್ತುಗಳನ್ನು ಬುಟ್ಟಿಯಲ್ಲಿಟ್ಟು ಕೊಂಡು ಹೊಲಗಳಿಗೆ ಒಯ್ಯುತ್ತಾರೆ.

ಹೊಲದಲ್ಲಿ ಮಣ್ಣಿನ ಎತ್ತುಗಳನ್ನು ಪೂಜಿಸಿ ಆಹಾರ ನೈವೇದ್ಯ ಅರ್ಪಿಸುತ್ತಾರೆ. ನಂತರ ಆಹಾರ ಪದಾರ್ಥಗಳನ್ನು ಚೂರು ಚೂರು ಮಾಡಿ ಹೊಲದ ಉದ್ದಗಲ ಚೆಲ್ಲುತ್ತಾರೆ. ಕೆರ್ಯಾಂಬಲಿ ಹಬ್ಬವಾದ ಒಂದು ತಿಂಗಳಲ್ಲಿ ಜೋಕುಮಾರನ ಹಬ್ಬ ಬರುತ್ತದೆ. ಜೋಕುಮಾರನ ಪ್ರಸಾದವನ್ನು ಕುಂಬಳ ಎಲೆಯಲ್ಲಿ ಹಾಕಿಕೊಂಡು ಹೊಲದ ಸುತ್ತಾ ಚೆಲ್ಲುತ್ತಾರೆ. ಹಿಂಗಾರು ಹಂಗಾಮಿನಲ್ಲಿ ಬರುವ ಶೀಗಿ ಹುಣ್ಣಿಮೆ ದಿವಸ ಮತ್ತೆ ಚರಗ ಹಬ್ಬ ಮಾಡುತ್ತಾರೆ. ಈ ಹಬ್ಬದ ಅಡುಗೆ ಹುರಕ್ಕಿ ಹೋಳಿಗೆ, ಚಕ್ಕುಲಿ, ಗಾರಿಗೆ, ವಡೆ, ಕೋಡುಬಳೆ, ಜೋಳದ ಕಡುಬು, ಐದು ನಮುನೆಯ ಕಾಯಿಪಲ್ಯ, ಅನ್ನ ಮೊದಲಾದವುಗಳನ್ನು ಬುಟ್ಟಿಯಲ್ಲಿ ತುಂಬಿಕೊಂಡು ಹೊಲಕ್ಕೆ ಹೋಗುತ್ತಾರೆ. ಹೊಲದಲ್ಲಿ ಐದು ಕೋಲುಗಳನ್ನು ನೆಟ್ಟು ಅದಕ್ಕೆ ಸುಣ್ಣ ಹಚ್ಚಿದ ಮಡಿಕೆಗಳನ್ನು ಟೊಪ್ಪಿಗೆಯಂತೆ ಹಾಕುತ್ತಾರೆ. ಕೆಲವು ಹಿಂಡು ಗಿಡಗಳ ಕೆಳಗೆ ಐದು ದುಂಡಗಿನ ಕಲ್ಲುಗಳನ್ನಿಟು ಸುಣ್ಣ ಮತ್ತು ಕೆಂಪು ಮಣ್ಣು ಹಚ್ಚಿ ಪೂಜಿಸುತ್ತಾರೆ. ನಂತರ ಆಹಾರ ನೈವೇದ್ಯ ಅರ್ಪಿಸಿ, ಬೆಂಕಿಯಲ್ಲಿ ಊದು ಹಾಕಿ ಹೊಗೆಹಿಡಿಸುತ್ತಾರೆ. ಎಲ್ಲಾ ಆಹಾರ ಪದಾರ್ಥಗಳನ್ನು ಚೂರು ಚೂರಾಗಿ ಮಿಶ್ರಮಾಡಿ ಹೊಲದ ಉದ್ದಗಲ ಚೆಲ್ಲುತ್ತಾ ಅಡ್ಡಾಡುವಾಗ ''ಹುಲ್ಲೂಲ್ಲೋಹುಲ್ಲಿ'' (ಹೊಲದ ಬೆಳೆ ಹುಲುಸಾಗಲಿ) ಎಂದು ಹೇಳುತ್ತಾರೆ. ಹಸಿರುಡುಗೆ ತೊಟ್ಟ ಭೂತಾಯಿಗೆ ಬಸಿರೂಟವೆಂದು, ಬಯಕೆಯೂಟವೆಂದು ಈ ರೀತಿಯ ಚರಗ ಹಬ್ಬ ಆಚರಿಸುತ್ತಾರೆ.

ಬೆಳೆಗಳ ಬೆಳವಣಿಗೆಯ ಹಂತಕ್ಕನುಸರಿಸಿ, ಇಂತಹ ಕ್ರಮಗಳನ್ನು ಕೈಗೊಳ್ಳುತ್ತಾರೆ. ಸುಣ್ಣ ಹಚ್ಚಿದ ಮಡಿಕೆಗಳ ಮೇಲೆ ಪಕ್ಷಿಗಳು ಕೂರುತ್ತವೆ. ಹೊಲದಲ್ಲಿ ಚೆಲ್ಲಿದ ಆಹಾರ ಪದಾರ್ಥಗಳ ವಾಸನೆ ಹಿಡಿದು ತಿನ್ನುತ್ತವೆ. ಆಗ ಬೆಳೆಗಳ ಕಾಯಿ ಕೊರಕ ಇತರ ಕೀಟಗಳ ವಾಸನೆ ಪಕ್ಷಿಗಳಿಗೆ ಸಹಜವಾಗಿ ಬರುತ್ತದೆ. ಆಗ ಕೀಟಗಳನ್ನು ಪಕ್ಷಿಗಳು ತಿನ್ನಲು ತೊಡಗುತ್ತವೆ. ಹೀಗೆ ಕೀಟಗಳತ್ತ ಪಕ್ಷಿಗಳನ್ನು ಆಕರ್ಷಿಸಿ ಕೀಟ ನಾಶ ಮಾಡುವ ಸರಳ ಸುಲಭ ಹಾಗೂ ಖರ್ಚಿಲ್ಲದ ಜೈವಿಕ ಕೀಟ ಹತೋಟಿ ಯನ್ನೂ ಈ ಆಚರಣೆಗಳಲ್ಲಿ ಗುರುತಿಸಬಹುದಾಗಿದೆ.

ಹಿತ್ತಲಗಿಡದ ಇದುವರೆಗಿನ ಬಹುತೇಕ ಹಳೆ ಸಂಚಿಕೆಗಳು ಲಭ್ಯವಿರುತ್ತವೆ. ರೂ. 600/- ಪಾವತಿ ಮಾಡಿ ಪಡೆದುಕೊಳ್ಳಬಹುದು. ಆಸಕ್ತರು ಮನಿ ಆರ್ಡರ್ ಅಥವಾ ಡಿ. ಡಿ. ಕಳಿಸಿ. ಅಂಚೆ ವೆಚ್ಚ ಉಚಿತ.

ರಾಜ್ಯ ಮಟ್ಟದ ಕೃಷಿ ಪತ್ರಿಕೋದ್ಯಮ ಪ್ರಶಸ್ತಿ ಪ್ರಧಾನ

ಧಾರವಾಡ ಪರ್ಯಾಯ ಕೃಷಿ ಮಾಧ್ಯಮ ಕೇಂದ್ರ (CAAM) ಸ್ಥಾಪಿಸಿರುವ ರಾಜ್ಯಮಟ್ಟದ ಕೃಷಿ ಪತ್ರಿಕೋದ್ಯಮ 2005ರ ಸಾಲಿನ ಪ್ರಶಸ್ತಿಯನ್ನು ಶಿರಸಿಯ ಸುಬ್ರಹ್ಮಣ್ಯ ಎಮ್. ಹೆಗಡೆ ಹಾಗೂ ಬೆಂಗಳೂರಿನ ವಿ. ಗಾಯತ್ರಿ ಪಡೆದಿರುತ್ತಾರೆ. ಇವರಿಗೆ ಹಿತ್ತಲಗಿಡದ ಹಾರ್ದಿಕ ಶುಭಾಶಯಗಳು. ತುಮಕೂರಿನ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಮತ್ತು ಸರ್ವೋದಯ ಮಹಾಸಂಘ ಸೂರಶೆಟ್ಟಿಕೊಪ್ಪ ಇವರ ಆಶ್ರಯದಡಿಯಲ್ಲಿ ಪರ್ಯಾಯ ಕೃಷಿ ಮಾಧ್ಯಮ ಕೇಂದ್ರವು ಡಿಸೆಂಬರ್ 18,2005ರಂದು ಧಾರವಾಡ ಜಿಲ್ಲೆ ಕಲ್ಘಟಗಿ ತಾಲೂಕು ಸೂರಶೆಟ್ಟಿ ಕೊಪ್ಪ ಗ್ರಾಮದಲ್ಲಿ, ಗ್ರಾಮಚೇತನ ಸಮಾರಂಭದಲ್ಲಿ5ನೇ ವಾರ್ಷಿಕೋತ್ಸವನ್ನು ಹಮ್ಮಿಕೊಂಡಿತ್ತು. ಕೃಷಿ ಪತ್ರಿಕೋದ್ಯಮ ಡಿಪ್ಲೊಮದ 2ನೇ ತಂಡದಲ್ಲಿ ಉತ್ತೀರ್ಣರಾದ ಹೆಚ್. ಕೆ. ಬಸವರಾಜು, ಶೈಲಜಾ ಬಸವರಾಜ್ ಬೆಳ್ಳಂಕಿ ಮಠ, ಪುಷ್ಪಾ ಎಂ.ಕುಮಾರ್, ರವಿಶಂಕರ್ ಹೆಚ್. ಜಿ., ಸಿದ್ದರಾಮೇಗೌಡ, ಕೆ. ಕುಮಾರ್ ಇವರುಗಳಿಗೆ ಈ ಸಮಾರಂಭದಲ್ಲಿ ಡಿಪ್ಲೊಮ ಪ್ರಮಾಣ ಪತ್ರ ವಿತರಿಸಿದ್ದು, ಜೊತೆಗೆ ಕ್ಯಾಮ್ ಫೆಲ್ಲೋಗಳೆಂದು ಗೌರವಿಸಲಾಗಿರುತ್ತದೆ. ಈ ಸಮಾರಂಭದಲ್ಲಿ ಗಾಣದಾಳು ಶ್ರೀಕಂಠ ಅವರ ''ಸಾವಯವ ಚಿತ್ತಾರ'' ಮಲ್ಲಿಕಾರ್ಜುನ ಹೊಸಪಾಳ್ಯ ಅವರ ''ನೆಟ್ಟರಾಗಿ'' ಆನಂದ ತೀರ್ಥ ಪ್ಯಾಟಿ ಅವರ ''ಶತ ಶೃಂಗದ ಸಾಲಿನಲ್ಲಿ'' ಕೃಷಿ ಕೃತಿಗಳು ಬಿಡುಗಡೆಯಾದವು.

ಮಹಿಳೆ ಮತ್ತು ಸಮುದಾಯಗಳ ಮುಂದಾಳತ್ವದಲ್ಲಿ ಒಣಭೂಮಿಯ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ ರಾಷ್ಟ್ರೀಯ ಕಾರ್ಯಗಾರ

ಮಾರ್ಚ್ 16–18, 2006 ರ ಸಂಯೋಜನೆ : ಡೆಕನ್ ಡೆವಲಪ್ ಮೆಂಟ್ ಸೊಸೈಟಿ, ಹೈದರಾಬಾದ್.

ಪಿ. ಸತೀಶ್ ನೇತೃತ್ವದ ಹೈದರಾಬಾದಿನ ಡೆಕನ್ ಡೆವಲಪ್‌ಮೆಂಟ್ ಸೊಸೈಟಿ (Deccan Development Society)ಮಹಿಳೆ ಮತ್ತು ಸಮುದಾಯಗಳ ಮುಂದಾಳತ್ವದಲ್ಲಿ ಒಣಭೂಮಿ ಪ್ರದೇಶದ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ ವಿಚಾರದಲ್ಲಿ ಒಂದು ಕ್ರಾಂತಿಯನ್ನೆ ನಡೆಸಿರುತ್ತದೆ. ಹೈದರಾಬಾದ್ ಸಮೀಪ, ಕರ್ನಾಟಕ ಆಂಧ್ರರಾಜ್ಯಗಳ ಗಡಿ ಪ್ರದೇಶದ ಮೇಡಕ್ ಜಿಲ್ಲೆಯ ಸುತ್ತಮುತ್ತ ಹಲವಾರು ವರ್ಷಗಳ ಅವಿರತ ಪ್ರಯತ್ನದಿಂದ 'ಆಹಾರ ಸಾರ್ವಭೌಮತೆ ಕಾಪಾಡಿಕೊಂಡಿರುವ ಹಳ್ಳಿಗಳು' *(Food Sovereignty Village)*, ಬೀಜ ಸಾರ್ವಭೌಮತೆ ಹಳ್ಳಿಗಳು *(Seed Sovereignty Village)*, ದಲಿತ ಜಲಾಯನ ಅಭಿವೃದ್ಧಿ ಮತ್ತು ಸಮುದಾಯ ಅರಣ್ಯಗಳು ಇತ್ಯಾದಿ ಕ್ರಾಂತಿಕಾರಕ ಅಭಿವೃದ್ಧಿ ಪ್ರಯೋಗಗಳನ್ನೇ ನಡೆಸಿ ಯಶಸ್ವಾಗಿರುತ್ತದೆ. ಈ ಪ್ರಯೋಗಳ ಫಲಿತಾಂಶವನ್ನು ರಾಜಕೀಯಗಣ್ಯರು, ವಿಜ್ಞಾನಿಗಳು, ಮಾಧ್ಯಮ ಮತ್ತಿತರರಿಗೆ ಮನದಟ್ಟು ಮಾಡಿ ಪ್ರತಿಕ್ರಿಯೆ ಪಡೆಯಲು ಈ ಕಾರ್ಯಾಗಾರವನ್ನು ಸಂಯೋಜಿಸಲಾಗಿತ್ತು.

ದಲಿತ ರೈತ ಮಹಿಳೆಯರಾದ ಸುಶೀಲಮ್ಮ, ಸರೋಜಮ್ಮ, ಅನುಸೂಯಮ್ಮ, ಸುನಂದಮ್ಮ, ರತ್ನಮ್ಮಮುಂತಾದವರಿಂದಲೇ ಈ ಅನನ್ಯ ಪ್ರಯೋಗದ ಅನುಭವ ಮಂಡನೆ ಮಾಡಿದ್ದು ಈ ಕಾರ್ಯಗಾರದ ವಿಶೇಷ.

ಒರಿಸ್ಸಾದ ಉರಾಲಿ ಬುಡಕಟ್ಟು ಜನರ ವಿಧಾನ

ಒರಿಸ್ಸಾದ ಉರಾಲಿ ಬುಡಕಟ್ಟು ರೈತರು ಧಾನ್ಯ ಕಾಳು, ಬೀಜಗಳನ್ನು ಬೂದಿಯೊಂದಿಗೆ ಮಿಶ್ರಣ ಮಾಡಿ ನಂತರ ಅದನ್ನು ಇಬ್ಬನೆ / ಪರಲೆ/ ಮದರಾಸ್‌ಮಲ್ಲಿಗೆ *(Clerodendrem infortunatum)* ಯ ಎಲೆಗಳಿಂದ ಸುರಳಿಸುತ್ತಿ ಅಥವಾ ಮುಚ್ಚಿ ಒಂದು ವರ್ಷದ ವರೆಗೂ ಸಂಗ್ರಹಿಸಿ ರಕ್ಷಿಸುತ್ತಾರೆ. ಹೀಗೆ ಮಾಡುವುದರಿಂದ ಬೂದಿಯು ಧಾನ್ಯದಲ್ಲಿರುವ ನೀರಿನಂಶವನ್ನು ಹೀರಿಕೊಂಡು ಶಿಲೀಂದ್ರ ಬೆಳವಣಿಗೆಯನ್ನು ನಿಯಂತ್ರಿಸಿದರೆ ಮದರಾಸ್ ಮಲ್ಲಿಗೆಯ ಕಹಿರುಚಿ, ಘಾಟುವಾಸನೆಯು ಕೀಟಗಳನ್ನು ನಿಯಂತ್ರಿಸುತ್ತದೆಯೆಂಬುದುನ್ನು ಉರಾಲಿ ಜನಾಂಗ ಬಹು ಹಿಂದೆಯೇ ತಿಳಿದಿರುತ್ತಾರೆ.

ಮೂಲ: ಹನಿಬೀ Vol 14(4) & 15(1) oct. 2003 - March 2004

ಉಪ್ಪಿನಿಂದ ಧಾನ್ಯಗಳ ರಕ್ಷಣೆ

ಧಾನ್ಯಗಳ ರಕ್ಷಣೆಗೆ ಪಾಂಡಿಚೆರಿಯ ಎಟ್ಟುಕುಡಿ ರೈತ ಜಿ. ಪಾಂಡುನಾಥನ್ ಗೊವಿಂದರಾಜು ಎಂಬುವರು ಸಾಮಾನ್ಯ ಉಪ್ಪು/ ಅಡಿಗೆ ಉಪ್ಪನ್ನು ಧಾನ್ಯ ತುಂಬಿರುವ ಮಡಿಗಳ ಕೆಳಗೆ ಹಾಕುತ್ತಾರಂತೆ. ಇದರಿಂದ ಕೀಟಗಳು ಉಪ್ಪಿನಲ್ಲಿ ಚಲಿಸಲಾಗದೆ ಮಡಿಗಳ ಹತ್ತಿರ ಹೋಗುವುದು ತಪ್ಪುತ್ತದೆಯಂತೆ.

ಮೂಲ: ಹನಿಬೀ Vol 11(4) & Vol 12(1) oct. 2000-March 2001

ಮುಖಹುಳುಗಳಿಂದ ದ್ವಿದಳ ಧಾನ್ಯಗಳ ರಕ್ಷಣೆ

ಮುಖಹುಳು *(Callosobruches chinensis)* ಸಂಗ್ರಹಿಸಿಟ್ಟಿರುವ (ಅವರೆ,ತೊಗರಿ, ಹುರಳಿ, ಕಡಲೆ,ಅಲಸಂದಿ,ಹೆಸರು ಮುಂತಾದ) ದ್ವಿದಳ ಧಾನ್ಯಗಳಿಗೆ ದಾಳಿಯಿಟ್ಟು ಕೆಲವೇ ತಿಂಗಳುಗಳಲ್ಲಿ ಧಾನ್ಯವನ್ನು ನಾಶಗೊಳಿಸುತ್ತವೆ. ಇದರಿಂದ ರೈತರಿಗೆ ಗಣನೀಯ ನಷ್ಟ ಉಂಟಾಗುತ್ತದೆ. ಕಟಾವಿನ ನಂತರ ಸಂಗ್ರಹದ ಮಡಿಗಳಿಗೆ ಪ್ರವೇಶಿಸುವ ಈ ಕೀಟವು ಶೀಘ್ರಗತಿಯಲ್ಲಿ ಅಭಿವೃದ್ಧಿಹೊಂದಿ ಧಾನ್ಯವನ್ನು ಅನುಪಯುಕ್ತಗೊಳಿಸುತ್ತವೆ.


ಇವುಗಳ ನಿಯಂತ್ರಣಕ್ಕೆ ಉದಯಪುರದ ಅಭಿಷೇಕ್ ಶುಕ್ಲ ಎಂಬುವರು ಪರಿಣಾಮಕಾರಿ ವಿಧಾನವನ್ನು ಬಳಸುತ್ತಿದ್ದಾರೆ. ಪುದಿನದ *(Mentha spicata or M. arvensis or M.piperita)* ಎಣ್ಣೆಯನ್ನು ಒಂದು ಮುಚ್ಚಳದಲ್ಲಿ ಅಥವಾ ಒಂದು ಚಿಕ್ಕ ಮಡಿಕೆಯಲ್ಲಿ 1–2 ಹನಿಯಷ್ಟು ಹಾಕಿ ಇಟ್ಟರೆ ಇದು ಹೊರಗಿನಿಂದ ಬರುವ ಕೀಟವನ್ನು ನಿಯಂತ್ರಿಸುತ್ತದೆಯಂತೆ. ಒಂದು ವೇಳೆ ಕೀಟಗಳು ಒಳಗಡೆ ಪ್ರವೇಶಿಸಿದ್ದರೆ, ಈ ತೈಲದ ಪರಿಣಾಮದಿಂದ ಕೀಟಗಳ ಮೊಟ್ಟೆಯಿಡುವ ಶಕ್ತಿ ಕುಂದುತ್ತದೆಯೆಂದು ಅಭಿಷೇಕ್ ಹೇಳುತ್ತಾರೆ.

ಮೂಲ: ಹನಿಬೀ Vol 11(3) July - Sept. 2000

ಕಾರೈಕಲ್ ಸಿ.ಬಾಬು ರವರ ವಿಧಾನ

ಒರಿಸ್ಸಾದ ಕಾರೈಕಲ್ ಸಿ. ಬಾಬು ರವರ ಪ್ರಕಾರ ಬೇವಿನ ಎಲೆ ಮತ್ತು ಹೊಂಗೆ ಎಲೆಗಳೊಂದಿಗೆ ಧಾನ್ಯವನ್ನು ಸಂಗ್ರಹಿಸಿದರೆ ಧಾನ್ಯಗಳಿಗೆ ಬರುವ ಕೀಟ ಹಾಗೂ ರೋಗ ಗಳನ್ನು ನಿಯಂತ್ರಿ ಸ ಬಹುದಂತೆ. ಹೆಚ್ಚಿನ ಫಲಿತಾಂಶ ಕ್ಕಾಗಿ ಎಲೆ ಗಳನ್ನು ಬದಲಾಯಿಸಿ ಹೊಸ ಎಲೆಗಳನ್ನು ಬಳಸುತ್ತಿರ ಬೇಕೆಂದು ಹೇಳುವ ಬಾಬು ಮತ್ತೊಂದು ಪರ್ಯಾಯ ವಿಧಾನವನ್ನು ವಿವರಿಸಿ ದ್ದಾರೆ. ಒಣಗಿದ ಬೇವಿನ, ಹೊಂಗೆಯ ಎಲೆ ಗಳೊಂದಿಗೆ ಒಣ ಮೆಣಸಿನ ಕಾಯಿಗಳನ್ನು ಒಂದು ಮಡಿಕೆಯಲ್ಲಿ ಹಾಕಿ, ಬೆಂಕಿ ಹೊತ್ತಿಸಿ ಸಂಗ್ರಹಣಾ ಕೊಠಡಿಯಲ್ಲಿಡಬೇಕು. ಕೀಟದ ಬಾಧೆಅಧಿಕವಾಗಿದ್ದರೆ / ಕೀಟದ ಸಾಂದ್ರತೆ ಹೆಚ್ಚಾಗಿದ್ದರೆ ಈ ವಿಧಾನವನ್ನು ಪುನರಾವರ್ತಿಸಿದಾಗ ಘಾಟು ಹೊಗೆಯ ಪರಿಣಾಮದಿಂದ ಕೀಟದ ಬಾಧೆ ನಿಯಂತ್ರಣಕ್ಕೆ ಬರುತ್ತದೆಯೆಂದು ಬಾಬು ಹೇಳುತ್ತಾರೆ. *ಮೂಲ: ಹನಿಬೀ Vol 11(4) & Vol 12(1) Oct. 2000 - March 2001*

ದ್ವಿದಳ ಧಾನ್ಯಗಳ ರಕ್ಷಣೆ



ಗುಜರಾತಿನ ವಲಸಾದ್ ಜಿಲ್ಲೆ ಧರಮ್ ಪುರ ತಾಲ್ಲೂಕು ಬಿಲ್‌ಪುಡಿ ಗ್ರಾಮದ ರೈತ ಬಾಪ್ ಜಿ ಬಾಯ್ ಭಾಯಲ್ ಬಾಯ್ ಗವಿಂತ್ ಅವರು ದ್ವಿದಳ ಧಾನ್ಯಗಳ ರಕ್ಷಣೆಗೆ ತಮ್ಮದೇ ಆದ ಸಾಂಪ್ರದಾಯಿಕ ವಿಧಾನವನ್ನು ಬಳಸುತ್ತಿದ್ದಾರೆ. ಇವರು ಭತ್ತದ ಹುಲ್ಲಿನ ಹಗ್ಗದಿಂದ ಮಾಡಿದ ಬುಟ್ಟಿಯಲ್ಲಿ ತೇಗದ ಎಲೆಗಳನ್ನು ಜೋಡಿಸಿ, ಒಣಗಿದ ಧಾನ್ಯವನ್ನು , ಬೇವಿನ ಎಲೆ, ಬೂದಿ, ಕಬ್ಬಿಣದ ತುಂಡುಗಳೊಂದಿಗೆ ತುಂಬಿಸಿ ಬುಟ್ಟಿಯನ್ನು ತೇಗದ ಎಲೆ ಹಾಗೂ ಭತ್ತದ ಹುಲ್ಲಿನ ಹಗ್ಗದಿಂದ ಮುಚ್ಚಿ ಭದ್ರ ಪಡಿಸುತ್ತಾರೆ. ನಂತರ ಸಗಣಿ ಮತ್ತು ಮಣ್ಣಿನ ಮಿಶ್ರಣವನ್ನು ಬುಟ್ಟಿಗೆ ಸುತ್ತಲು ಲೇಪಿಸಿ ಸಂಗ್ರಹಿಸುವುದರಿಂದ ಧಾನ್ಯಗಳನ್ನು ಬಹು ಕಾಲ ಹಾಳಾಗದಂತೆ ರಕ್ಷಿಸಬಹುದು. ಬಾಯ್ ಗವಿಂತ್ ಹತ್ತಾರು ವರ್ಷಗಳಿಂದ ಈ ವಿಧಾನವನ್ನು ಅನುಸರಿಸುತ್ತಿರುವರು.

ಧಾನ್ಯಗಳ ಸಂರಕ್ಷಣೆಯಲ್ಲಿ ಶುಂಠಿಯ ಬಳಕೆ

ಗುಜರಾತಿನ ರೈತರು 30 ಗ್ರಾಂ ಶುಂಠಿಯ ಪುಡಿ ಮತ್ತು 50ಗ್ರಾಂ ಬೇವಿನ ಬೀಜದ ಪುಡಿಯನ್ನು ದ್ವಿದಳ ಧಾನ್ಯಗಳಾದ ಅವರೆ, ಉದ್ದು, ಅಲಸಂದಿ, ತೊಗರಿ, ಹುರಳಿ, ಸೋಯಾ ಅವರೆ ಮುಂತಾದವು (ಒಂದು ಕೆಜಿ.ಧಾನ್ಯಕ್ಕೆ) ಗಳೊಂದಿಗೆ ಮಿಶ್ರಣ ಮಾಡಿ ಇವುಗಳು ಹಾಳಾ ಗದಂತೆ ಸಂಗ್ರಹಿಸುತ್ತಿರುವುದಾಗಿ ತಿಳಿದು ಬಂದಿದೆ. *ಮೂಲ: ಹನಿಬೀ Vol 11(4) & Vol 12(1) oct. 2000 - March 2001*

ವಿಶೇಷ ಸೂಚನೆ

ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಸಂಶೋಧನೆ, ವಾಣಿಜ್ಯ ಮತ್ತಾವುದೇ ದೃಷ್ಟಿಯಿಂದ ಬಳಸಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.

ರೈತರು ಮೊದಲು ತಾಂತ್ರಿಕ ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ . ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡ ದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ. *- ಸಂಪಾದಕ*

ಮುಹಮುದ್ ಸಯಿದುಲ್ಲಾ ರವರ ನೆಲಜಲಗಳೆರಡರ ಮೇಲೂ ಚಲಿಸುವ ಬೈಸಿಕಲ್

1975 ರಲ್ಲಿ ಬಿಹಾರದಲ್ಲಿ ಪ್ರವಾಹ ಉಂಟಾಗಿ ಮೂರು ವಾರಗಳ ಕಾಲ ಜನಜೀವನ ಅಸ್ತವ್ಯಸ್ತವಾಗಿತ್ತು. ಜಿಟ್ವಾಜಿನಿವಾದ ಮಹಮುದ್ ಸಯಿದುಲ್ಲಾ ಒಂದು ನದಿಯನ್ನು ದಾಟಿ ಜರೂರಾಗಿ ಮುಂದಿನ ಪಟ್ಟಣಕ್ಕೆ ಹೋಗಬೇಕಾದ ಪರಿಸ್ಥಿತಿ ಇತ್ತು, ನದಿಯನ್ನು ದಾಟಲು ದೋಣಿಯನ್ನು ಅವಲಂಬಿತರಾಗಿದ್ದರು. ಒಮ್ಮೆ ಇವರಿಗೆ ನೀರಿನ ಮೇಲೆಯೂ ಚಲಿಸುವಂತಹ ಬೈಸಿಕಲ್ ಅನ್ನು ನಿರ್ಮಿಸಿದರೆ ಅನುಕೂಲವಾಗುತ್ತದೆಯೆಂದು ಯೋಚನೆ ಹೊಳೆಯಿತು. ಮನೆಗೆ ಬಂದು ಆ ಬಗ್ಗೆ ಪ್ರಯೋಗವನ್ನು ಆರಂಭಿಸಿ ನೀರಿನ ಮೇಲೆ ಚಲಿಸುವ ಒಂದು ಸೈಕಲ್ ಅನ್ನು ನಿರ್ಮಿಸಿಯೇ ಬಿಟ್ಟರು. ಆ ಸೈಕಲ್ಲಿಗೆ ''ನೂರ್ ಸೈಕಲ್'' ಎಂದು ಹೆಸರಿಟ್ಟರು. ಮೊದಲು ತಯಾರಿಸಲು 6000 ರೂಗಳು ಬೇಕಾಗಿತ್ತು. ಈಗ 3000 ರೂಗಳಲ್ಲಿ ನಿರ್ಮಿಸಬಹುದೆಂದು ಸಯಿದುಲ್ಲಾ ಹೇಳುತ್ತಾರೆ.

ಈ ನೆಲ ಜಲದ ಮೇಲೆ ಚಲಿಸುವ ಬೈಸಿಕಲ್ (*Amphibions Bicycle*) ಸಾಮಾನ್ಯ ಸೈಕಲ್ ರೀತಿಯೇ ಇದೆ. ಅದರ ಜೊತೆಗೆ ಎರಡು ಜೊಡಣೆಗಳು ನೀರು ಮತ್ತು ಭೂಮಿಯ ಮೇಲೆ ಚಲಿಸುವ ಹಾಗೆ ಮಾಡಿದೆ. ಮೊದಲನೆಯ ಜೊಡಣೆಯ ನಾಲ್ಕು ಆಯುತಾ ಆಕಾರದ ಗಾಳಿ ಡಬ್ಬಗಳು ಬೈಸಿಕಲ್ಲನ್ನು ನೀರಿನ ಮೇಲೆ ಚಲಿಸಲು ಸಹಕಾರಿಯಾಗಿವೆ. ಈ ಆಯತಕಾರದ ಡಬ್ಬಗಳು ಎರಡು ಜೊತೆಯಲ್ಲಿ ಜೊಡಣೆ ಮಾಡಲಾಗಿದೆ. ಪ್ರತಿ ಒಂದು ಜೊತೆ ಮುಂದಿನ ಚಕ್ರಕ್ಕೆ ಮತ್ತು ಹಿಂದಿನ ಚಕ್ರಕ್ಕೆ ಅಳವಡಿಸಲಾಗಿದೆ. ಈ ಡಬ್ಬಗಳನ್ನು ಭೂಮಿಯ ಮೇಲೆ ಸೈಕಲ್ಲನ್ನು ಓಡಿಸುವಾಗ ಕಳಚಿಟ್ಟು ಕೊಳ್ಳಬಹುದು. ಈ ಡಬ್ಬಗಳು ಬಹಳ ಹಗುರವಾಗಿದ್ದು ಸೈಕಲ್ ಸವಾರ ಹೆಚ್ಚಿನ ಪರಿಶ್ರಮ ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. ಇನ್ನೊಂದು ಜೊಡಣೆಯು ಚಕ್ರಾಕಾರದ ಫ್ಯಾನ್ ಬ್ಲೇಡ್‌ಗಳನ್ನು ಹಿಂದಿನ ಗಾಲಿಗಳಿಗೆ ಅಳವಡಿಸಲಾಗಿದೆ. ಯಾವಾಗ ಸೈಕಲ್ ನೀರಿನ ಮೇಲೆ ತುಳಿಯಲ್ಪಡುವುದೋ ಆಗ ಹಿಂದಿನ ಚಕ್ರಕ್ಕೆ ಅಳವಡಿಸಿದ ಬ್ಲೇಡ್‌ಗಳು ತಿರುಗುವಂತೆ ಮಾಡಿ ಮತ್ತು ನೀರನ್ನು ಹಿಂದೆ ತಳ್ಳುವಂತೆ ಮಾಡುತ್ತದೆ. ಇದರಿಂದ ಬೈಸಿಕಲ್ ಮುಂದೆ ಹೋಗಲು ಸಹಾಯವಾಗುತ್ತದೆ. ಈ ಬ್ಲೇಡ್‌ಗಳನ್ನು ಯಾವ ರೀತಿ ಅಳವಡಿಸಲಾಗಿದೆಯೆಂದರೆ ಸೈಕಲ್ಲನ್ನು ನಾವು ವಿರುದ್ಧದಿಕ್ಕಿನಲ್ಲಿ ಚಲಿಸಬಹುದು.

ಮಹಮುದ್ ಸಯಿದುಲ್ಲಾ ಅವರತಂದೆ ಒರ್ವರೈತ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಸಯಿದುಲ್ಲಾ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದಾರೆ. ಒಬ್ಬ ಮಗ, ಇಬ್ಬರು ಪುತ್ರಿಯರು. ಸಯದುಲ್ಲಾರವರು ಮಿನಿ ಟ್ರಾಕ್ಟರು, ಕೇಬಲ್ ಪ್ಯಾನ್, ಮೇವು ಕತ್ತರಿಸುವ ಯಂತ್ರ, ಶಾಕ್ ಅಬ್‌ಸಾರ್ಬರ್ ಬೈಸಿಕಲ್ ಮತ್ತು ವಿದ್ಯುತ್ ಶಕ್ತಿ ಉತ್ಪಾದಿಸಲು ಸಣ್ಣ ಟರ್ಬೈನ್ ಮುಂತಾದ ಅನುಶೋಧನೆಗಳನ್ನೂ ಮಾಡಿರುವರು. ಇವರ ಈ ನೆಲಜಲಗಳೆರಡರ ಮೇಲೆ ಓಡುವ ಬೈಸಿಕಲ್ಲುಗೆ 2006 ಜನವರಿ 5–6, ರಲ್ಲಿ ಅಹಮದಾಬಾದಿನಲ್ಲಿ ಜರುಗಿದ ರಾಷ್ಟ್ರೀಯ ಅನುಶೋಧನ ಪ್ರತಿಷ್ಠಾನದ ತೃತೀಯ ಸ್ಪರ್ಧಯಲ್ಲಿ ಪ್ರಥಮ ಬಹುಮಾನ ದೊರಕಿರುತ್ತದೆ. ರೂ 1 ಲಕ್ಷದ ಈ ಬಹುಮಾನವನ್ನು ಮಾನ್ಯ ರಾಷ್ಟ್ರಪತಿ ಡಾ|| ಎ. ಪಿ. ಜೆ. ಅಬ್ದುಲ್ ಕಲಾಮ್ ನೀಡಿ ಸಯಿದುಲ್ಲಾರವರನ್ನು ಗೌರವಿಸಿರುತ್ತಾರೆ.

ಅಂಗವಿಕಲ ಧಂಜಿಬಾಯ್ ಕೇರಾಯ್ ರವರ ವಿಶೇಷ ವಿನ್ಯಾಸದ ಸ್ಕೂಟರ್

ಗುಜರಾತ್ ರಾಜ್ಯದ ಕುಜ್ ಜಿಲ್ಲೆ, ಮುಂಡ್ರಾ ತಾಲ್ಲೂಕು ಕರಗೋಗ ಗ್ರಾಮದ ಒಂದು ಮಧ್ಯಮ ವರ್ಗದ ರೈತಾಪಿ ಕುಟುಂಬದಲ್ಲಿ ಜನಿಸಿದ ಧಂಜಿಬಾಯ್ ಕೇರಾಯ್ ಹುಟ್ಟು ಅಂಗವಿಕಲರು. ಅವರು ಶಾಲೆಗೆ ಹೋಗಿ ಕಲಿಯಲಿಲ್ಲ. ಮುಂದೆ ಸ್ವ ಇಚ್ಛೆಯಿಂದ ಸರ್ಕಾರದ ಪ್ರೌಢ ಶಿಕ್ಷಣ ಕೇಂದ್ರ ನೀಡುವ ಮೂರು ತಿಂಗಳ ಕಾರ್ಯಕ್ರಮದಲ್ಲಿ ಸ್ವಲ್ಪ ಮಟ್ಟಿಗೆ ಓದು ಬರೆಯುವುದನ್ನು ಕಲಿತರು. 33ರ ಹರೆಯದ ಧಂಜಿಬಾಯ್ ಕೇವಲ ಒಂದೂವರೆ ಅಡಿ ಎತ್ತರವಿದ್ದು 19 ಕಿ.ಗ್ರಾಂ ತೂಕವಿದ್ದಾರೆ.! ಇವರು ಎರಡು ವರ್ಷದವರಾಗಿದ್ದಾಗ ಪೊಲಿಯೋ ಪೀಡಿತರಾದರು. ಅಂದಿನಿಂದ ಅವರಕಾಲುಗಳು ಹಾಗೂ ಒಂದು ಕೈ ಸ್ವಾದೀನ ಕಳೆದು ಕೊಂಡವು. ಅಲ್ಲದೆ ಯಾವುದೆ ರೀತಿಯ ವಿದ್ಯಾಭ್ಯಾಸ, ತರಬೇತಿಗಳಿಲ್ಲದಿದ್ದರೂ ವಿದ್ಯುತ್ ಉಪಕರಣಗಳ ರಿಪೇರಿಯನ್ನು ಕಲಿತು ಸುತ್ತ ಮುತ್ತ ಒಳ್ಳೆಯ ಹೆಸರುಗಳಿಸಿರುತ್ತಾರೆ. ಇವರು ತಮಗಾಗಿ ಒಂದು ವಿಶೇಷ ವಿನ್ಯಾಸದ ಸ್ಕೂಟರನ್ನು ತಯಾರಿಸಿಕೊಂಡಿದ್ದು ಇದರ ಮೂಲಕ ಒಂದು ದಿನದಲ್ಲಿ 150 ಕಿ.ಮೀ ದೂರ ಪ್ರಯಾಣ ಮಾಡುಬಹುದಾಗಿರುತ್ತದೆ.

ಧಂಜಿಬಾಯ್‌ರವರಿಗೆ ಸ್ಕೂಟರ್ ನಡೆಸಬೇಕೆಂಬ ಆಸೆಯಿತ್ತಂತೆ. ಆದರೆ ಎರಡುಕಾಲು ಒಂದು ಕೈ ಸ್ವಾದೀನವಿಲ್ಲದ ಒಬ್ಬ ಅಂಗವಿಕಲರಾದ ಇವರು ಸ್ಕೂಟರ್ ನಡೆಸುವುದು ಕಷ್ಟಸಾಧ್ಯ. ಈ ಆಸೆಯು ಅವರನ್ನು ಅನುಶೋಧನೆಯತ್ತ ಪ್ರೇರೇಪಿಸಿತು. ಆ ನಿಟ್ಟಿನಲ್ಲಿ ಅವರು ಸಾಮಗ್ರಿಗಳ ಸಂಗ್ರಹಣವನ್ನು ಪ್ರಾರಂಭಿಸಿಯೆ ಬಿಟ್ಟರು. ಅವರಿಗಿದ್ದ ಮೊದಲ ಸಮಸ್ಯೆಯೆಂದರೆ ದ್ವಿಚಕ್ರ ವಾಹನದ ಹ್ಯಾಂಡಲ್‌ನ್ನು ಎರಡು ಕೈಗಳಿಂದ ಹಿಡಿದು ಬ್ಯಾಲೆನ್ಸ್ ಮಾಡುವುದು. ಅದಕ್ಕಾಗಿ ಅವರು ದ್ವಿಚಕ್ರವಾಹನವನ್ನು ನಾಲ್ಕು ಚಕ್ರಗಳ ವಾಹನವಾಗಿ ಮಾರ್ಪಡಿಸಲು ಯೋಚಿಸಿದರು. ಆಟೋರಿಕ್ಷಾದ ಎರಡು ಚಕ್ರಗಳನ್ನು ತಂದು ಗಟ್ಟಿಯಾದ ಸ್ಟೀಲ್ ಪೈಪನ್ನು ಬಳಸಿ, ಸ್ಕೂಟರಿಗೆ ಚಕ್ರಗಳನ್ನು ಅಳವಡಿಸುವುದರಲ್ಲಿ ಯಶಸ್ವಿಯಾದರು. ಈಗ ತಮಗೆ ಅನುಕೂಲವಾಗುವ ರೀತಿಯಲ್ಲಿ ಮಾರ್ಪಡಿಸಿ ಬಳಸುತ್ತಿದ್ದಾರೆ.

ಈ ವಾಹನವನ್ನು ತಯಾರಿಸಲು ಬಜಾಜ್ ಪ್ರಿಯಾ ಸ್ಕೂಟರಿನ ಯಂತ್ರ ಹಾಗೂ ಬಜಾಜ್ ಚೇತಕ್‌ನ ಹೊರ ಕವಚವನ್ನು ಬಳಸಲಾಗಿದೆ. ಸ್ಕೂಟರಿನ ಎರಡೂ ಬದಿಗಳಲ್ಲಿ ಒಂದೊಂದು ಚಕ್ರವನ್ನು ಸ್ಕೂಟರಿನ ಬ್ಯಾಲೆನ್ಸ್ ಸರಿದೂಗಿಸಲು ಅಳವಡಿಸಲಾಗಿದೆ. ಚಲಿಸುವ ಸೀಟೊಂದನ್ನು ಮೂಲ ಸೀಟಿನ ಸ್ಥಾನದಲ್ಲಿ ಅಳವಡಿಸಲಾಗಿದೆ. ಇದು ಧಂಜಿಬಾಯ್ ರವರು ಹ್ಯಾಂಡಲ್ ಹಿಡಿಯಲು ಸಹಾಯಕವಾಗುತ್ತದೆ. ಹಿಂದಿನ ಎರಡು ಚಕ್ರಗಳು ಸ್ವಲ್ಪ ಮೇಲ್ಭಾಗದಲ್ಲಿರುವುದರಿಂದ ವಾಹನವು ಜಾರುವುದಿಲ್ಲ. 60–70 ಕಿ.ಮೀ / ಘಂಟೆಯ ವೇಗದಲ್ಲಿ ಈ ವಾಹನವನ್ನು ಚಲಿಸಬಹುದು.

ಈ ಅನುಶೋಧನೆಯನ್ನು ಮಾಡಲು ಅವರು ಮೂರು ತಿಂಗಳಕಾಲ ಶ್ರಮಿಸಿದರು ಮತ್ತು ಮೂರು ದಿನಗಳಲ್ಲಿ ವಾಹನ ಚಾಲನೆಯನ್ನು ಕಲಿತರು. ಧಂಜಿಬಾಯ್‌ರವರ ಈ ಶೋಧನೆಗೆ ಜನವರಿ 5–6, 2005ರಲ್ಲಿ ಅಹಮದಾಬಾದಿನಲ್ಲಿ ಜರುಗಿದ ರಾಷ್ಟ್ರೀಯ ಅನುಶೋಧನ ಪ್ರತಿಷ್ಠಾನದ ತೃತಿಯ ಸ್ಪರ್ಧೆಯಲ್ಲಿ ದ್ವಿತಿಯ ಬಹುಮಾನ ದೊರಕಿರುತ್ತದೆ. ರೂ 50,000 ಬಹುಮಾನವನ್ನು ಮಾನ್ಯ ರಾಷ್ಟ್ರಪತಿ ಡಾ|| ಎ. ಪಿ. ಜೆ. ಅಬ್ದುಲ್ ಕಲಾಮ್ ನೀಡಿ ಧಂಜಿಬಾಯ್‌ರವರನ್ನು ಗೌರವಿಸಿರುತ್ತಾರೆ.

ಸಂಪಾದಕೀಯ

(3) ಈ ಎಲ್ಲಾ ನೀತಿ, ಕಾಯಿದೆ, ಮಸೂದೆಗಳು ಕೇಂದ್ರಸರ್ಕಾರದ ಮಟ್ಟದಲ್ಲೇ ರೂಪಿತವಾಗಿ ಕಾರ್ಯರೂಪಕ್ಕೆ ಬರುತ್ತಿವೆ. ಬದಲಿಗೆ ಈ ಪ್ರಕ್ರಿಯೆಯಲ್ಲಿ ರಾಜ್ಯ ಸರ್ಕಾರ, ಪಂಚಾಯತ್ ರಾಜ್ ಸಂಸ್ಥೆಗಳಿಂದ ಹಿಡಿದು ಅತ್ಯಂತ ತಳಮಟ್ಟದ ಗ್ರಾಮ ಸಭೆಗಳೂ ಒಳಗೊಳ್ಳುವಂತೆ ಮಾಡಲು ಸಂವಿಧಾನಾತ್ಮಕ ತಿದ್ದುಪಡಿ ತರಬೇಕು.

ಈ ನಿಟ್ಟಿನಲ್ಲಿ ಇದೇ ಮೇ 2006ರಂದು ಇದೂವರೆಗೂ ನಡೆದ ಸರ್ಕಾರದ ಪ್ರಯತ್ನ ಮತ್ತು ವಿವಿದೆಡೆ ತಳಮಟ್ಟದ ಪ್ರಯೋಗಗಳ ಆಧಾರದ ಮೇಲೆ "ರೈತ ಅನುಶೋಧನೆ ಮತ್ತು ಸಮುದಾಯಗಳ ಸಹಭಾಗಿತ್ವದಲ್ಲಿ ಕೃಷಿ ಭೂಮಿಯಲ್ಲೇ ಜೀವ ವೈವಿಧ್ಯದ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಅಗತ್ಯವಿರುವ ಪ್ರೋತ್ಸಾಹಗಳು" *(Incentives for Supporting On farm Conservation and Augmentation of Agrobiodiversity through Farmer's Innovations and Community Participation)* ಎಂಬ ಅಂತರ ರಾಷ್ಟ್ರೀಯ ನೀತಿ ಸಮಾಲೋಚನೆ ಸಭೆಯನ್ನು ಅಹಮದಾಬಾದಿನ "ಭಾರತೀಯ ನಿರ್ವಹಣಾ ಸಂಸ್ಥೆ" *(Indian Institute of Management)* ಯಲ್ಲಿ ಕರೆಯಲಾಗಿದೆ. ಆಸಕ್ತರು ಹನಿಬೀ ಸಂಪಾದಕರಾದ ಪ್ರೊ. ಅನಿಲ್ ಕೆ. ಗುಪ್ತಾರವರನ್ನು ಸರ್ಪಕಿಸಬಹುದು.

ಹಾಗೇ, ಕೇಂದ್ರ ಸರ್ಕಾರದ "ರಾಷ್ಟ್ರೀಯ ಜೀವ ವೈವಿಧ್ಯ ಕಾರ್ಯನೀತಿ ಮತ್ತು ಯೋಜನೆ" *(National Biodiversity Strategy and Action Plan)* ತಯಾರಿಕೆಯಲ್ಲಿ ಒಂದು ಪ್ರಮುಖ ಭಾಗವಾದ 'ಸಾಕಾಣಿಕೆಗೊಳಪಟ್ಟಿರುವ ಜೀವವಿವಿಧತೆ' *(Domesticated Biodiversity)* ಯ ಬಗ್ಗೆ ವಿವರವಾದ ಕಾರ್ಯನೀತಿ ಯೋಜನೆ ನಿರೂಪಣೆಯನ್ನು ನನ್ನ ಜವಾಬ್ದಾರಿಯಲ್ಲಿ ಕೈಗೊಳ್ಳಲಾಗಿರುತ್ತದೆ. ಈ ವರದಿಯನ್ನು ಸಾರ್ವಜನಿಕ ಅವಗಾಹನೆಗಾಗಿ ಹೈದರಬಾದಿನ ಡೆಕನ್ ಡೆವಲಪ್‌ಮೆಂಟ್ ಸಂಸ್ಥೆಯ ನಮ್ಮ ಮಿತ್ರ ಪಿ. ವಿ. ಸತೀಶ್ ಮುದ್ರಿಸಿ ಹೊರ ತಂದಿರುತ್ತಾರೆ. ಇದಕ್ಕಾಗಿ ಹಿತ್ತಲಗಿಡದ ಕೃತಜ್ಞತೆಗಳು

ಈ ಎಲ್ಲಾ ಪ್ರಯತ್ನಗಳಿಂದ ರೈತ, ಮಹಿಳೆ, ತಳಮಟ್ಟದ ಜನ ಒಟ್ಟಾರೆ ಗ್ರಾಮೀಣ ಪರ ನೀತಿ ನಿಯಮಗಳು ಹೊರಬಂದು ಅನುಷ್ಠಾನ ಗೊಳ್ಳುವಂತಾಗ ಲೆಂದು ಹಿತ್ತಲಗಿಡ ಹಾರೈಸುತ್ತದೆ.

ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/–	ರೂ.400/–
ರೈತರು	ರೂ.60/–	ರೂ.500/–
ಇತರರು	ರೂ.75/–	ರೂ.600/–
ಸಂಸ್ಥೆಗಳು	ರೂ.350/–	ರೂ.2500/–
ಪೋಷಕರು	ರೂ.5000/– ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್/ಚೆಕ್ ಮೂಲಕ *'ಸಂಪಾದಕರು, ಹಿತ್ತಲಗಿಡ, ಬೆಂಗಳೂರು'* ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು.

ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

Printed by M/s Replica Offset Printers, Industrial Town, Rajajinagar, Bangalore - 560 044
Published by Smt. K. Meenakshi (Owner) at No.399, 14-B Cross, New Town Yelahanka, Bangalore-560 064,
Edited by Dr. T.N. Prakash Kammaradi

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)

ರಾಷ್ಟ್ರೀಯ ಮಟ್ಟದ ಐದನೇ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ **(Department of Science and Technology)** ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು **(Intellectual Property Rights)** ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪುರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 7,500 ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದ ಸ್ಕೌಟ್‌ಗಳು ಹಾಗು ಪರಿಶೋಧಕರಿಗೆ ಪ್ರತಿಯೊಬ್ಬರಿಗೂ 7,500 ಸಾಂತ್ವಾನ ಪುರಸ್ಕಾರಗಳಿವೆ. ಹಾಗೇ ರಾಜ್ಯ ಮಟ್ಟದಲ್ಲೂ ಪ್ರೋತ್ಸಾಹ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು ರಾಷ್ಟ್ರೀಯ ದಾಖಲಾತಿ ಪುಸ್ತಕದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿಯಿರುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಿಕೊಡಬಹುದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡಲಾಗುತ್ತಿದೆ ಎಂದು ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ, ಫೋಟೋಗಳನ್ನು ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ಐದನೇ ಸ್ಪರ್ಧೆಗೆ ಡಿಸೆಂಬರ್ 2006ರವರೆಗೆ ಅವಕಾಶವಿದೆ.

ಪೂರ್ವ ಸೂಚಿತ ಸಮ್ಮತಿ

ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಮುಂದೆ ಬಳಸಿಕೊಳ್ಳುವ ವಿಧಾನವನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹ ಅನುಶೋಧನೆಗಳ ನೈಜ ವಾರಸುದಾರರಿಂದ ಒಂದು 'ಪೂರ್ವ ಸೂಚಿತ ಸಮ್ಮತಿ' **(Prior Informed Consent)** ಪಡೆದ ನಂತರವೇ ಮುಂದುವರೆಯಲಾಗುವುದು.

ಪತ್ರಿಕೆ ನೋಂದಣಿ ಸಂಖ್ಯೆ 66842/96

ತೆರೆದ ಅಂಚೆ

ಗೆ, ...

....

....

....

ವಿಳಾಸ:
ಡಾ.ಟಿ. ಎನ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು
ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065
Ph: 080-23620025
email: hittalu@bgl.vsnl.net.in